Azim Premji Foundation


Karnataka Field Institutes

# ಬಯಲು Bayalu

Issue No.

**74**

**October 2018**




...a space of our own

# ಸ್ವಾತಂತ್ರ್ಯ

ಮಾನವೀಯ ಸಂಬಂಧಗಳ ನಡುವೆ
ಕಳಚಿತು ನನ್ನ ಸ್ವಾತಂತ್ರ್ಯ
ಸಮಾಜದ ಸಂಕೋಲೆಗಳಲ್ಲಿ ಸೆರೆ ಸಿಕ್ಕ ಸ್ವಾತಂತ್ರ್ಯ

**ನಾಗೇಶ್ ಕೆ.ಟಿ,** ಮಂಡ್ಯ




ವಯೋವೃದ್ಧರನ್ನು ಗೌರವಿಸೋಣ ಮತ್ತು ಸಲಹೋಣ


...a space of our own

# ಪರಿವಿಡಿ


1. A art of world enlightenment of Buddha……………...……….Flavia
2. ಓ ಮನವೇ……………………………………………………………………ಅರ್ಪಣ ಬಿ.ಜಿ
3. ಹೀಗೊಂದು ಸಿನಿಕತನ…………………………………………………………ನಾಜಿವಿ
4. ನನ್ನಜ್ಜ ಮತ್ತು ಗಾಂಧಿ ಟೋಪಿ ……………………………………………ಮಂಜುಳ. ಜಿ.ಹೆಚ್
5. ಶೋಧ ……………………………………………………………………ರಾಘವೇಂದ್ರ ಹೆರ್ಳೆ. ಜಿ
6. ಆ ದಿನಗಳು …………………………………………………………… ವರ್ಷಿತಾ. ಕೆ
7. ಮಹಾ(ದಾ)ತಾಯಿ ……………………………………………………………ನಾಗೇಶ್ ಕೆ. ಟಿ
8. Illustration- The teacher can change………………………………………………Haripriya
9. ತರಗತಿಯನ್ನು ಹೀಗೂ ನೋಡಬಹುದೇ? ………………………………………………Manasa
10. ನಾನು ಮೋಟಾರ್ ಬೈಕ್ ಕಲಿತ ಕ್ಷಣಗಳು ………………………………………ಶೌರೀಶ್ ಕುದ್ಕುಳಿ
11. ಆರಂಭಿಕ ಓದು ಬರಹ ……………………………………………………………ಹನುಮಂತರಾಜು
12. ಪ್ರಶ್ನಾರ್ಥಕ ……………………………………………………………………ಮಾರುತಿ. ಡಿ
13. ಗಾಂಧಿ ಮತ್ತು ಅಹಿಂಸೆ……………………………………………………………ಮಂಜುಳ ಜಿ.ಹೆಚ್

Azim Premji Foundation

**FLAVIA ABRAHAM**, BANGALURU



# ಓ ಮನವೇ...

ಅರ್ಪಣ ಬಿ. ಜಿ.

ಓ ಮನವೇ..,

ನೀನೇಕೆ ಇಷ್ಟು ಮರುಗುವೆ..?

ಬದುಕಿನಾಟದ ಪರಿಗೆ ನೀನೇಕೆ ಕೊರಗುವೆ..?

ಮತ್ತದೇ ನೋವ ನೆನೆದು ಏಕಿಷ್ಟು ಸೊರಗುವೆ..?

ಮಿಂಚಿದ ಕಾಲವ ಚಿಂತಿಸಿ ಮತ್ತೇಕೆ ಬಾಡುವೆ..?



ಓ ಮನವೇ..,

ಯಾವುದು ಶಾಶ್ವತವೆಂದು ಅರಿಯುವುದು ನೀನೆಂದು..?

ಕ್ಷಣಿಕ ಮನಮುದಕೆ ನೀನೇಕೆ ಮುಂದು..?

ಹಳೆಯ ನೆನಪಿನ ಕದವ ಮಾಡಿಬಿಡು ಬಂದು...

ನೋವ ಕ್ಷಣಗಳ ಕೊಂದು ನೆಮ್ಮದಿಯ ಹೊಂದು...



ಓ ಮನವೇ..,

ಮಾಡು ನೀ ನಿನಗೊಲಿದ ಜೀವನವ ಪ್ರೀತಿ...

ಪಟ್ಟು ಬಿಡದರು ಪಡೆಯಲು ಸಂತಸ-ಕೀರ್ತಿ...

ಉಳಿಪೆಟ್ಟು ಬಿದ್ದ ಶಿಲಯ ಕಲೆಯಾಗಲಿ ಸ್ಪೂರ್ತಿ...

ಮರುಕವ ಮರೆತು ನಗಲು ಕಲಿಯುವುದೇ ಬಾಳ ನೀತಿ...

# ಹೀಗೊಂದು ಸಿನಿಕತನ..

ಇದು ನಿನ್ನಾಟ. ನೀನು ಆಟವಾಡು ಅನ್ನುತ್ತಿ.

ಆಟ ಆಡಿಸುವವನು ನಾನು,

ನಿನ್ನ ಕೆಲಸ ಆಟವಾಡುವುದು ಏನೂ ಯೋಚಿಸದೇ ಆಡು,

ತಪ್ಪಾದರು ಸರಿಯಾದರೂ ಪರಿಣಾಮದ ಹೊಣೆ ನನ್ನದೇ.

ಹೋ! ಎಲ್ಲಾ ಅರ್ಥವಾಯಿತೆಂದು ನಂಬಿ ಆಟವಾಡಿದ್ದೇನೆ.

ಈಗ ಹೇಳಿಕೆ ಬದಲಾಗಿದೆ.

ಆಡುವ ಮೊದಲು ನೀನು ಯೋಚಿಸಬೇಕು ನಿನಗೆ ವಿವೇಕವನ್ನು
ಕೊಟ್ಟಿರುವುದು ಯಾಕೆ?

ಅಯ್ಯೋ ಪಾಪಪ್ರಜ್ಞೆ ಕಾಡುತ್ತದೆ. ಕೊನೆಗೂ ಈ ಆಟಕ್ಕೆ ನಾನೇ ಹೊಣೆ.

ಜೀವನ ಪೂರ್ತಿ ನಾನು ಆಡುವುದು ಯಾವುದು. ನೀನು ಆಡಿಸುವುದು
ಯಾವುದು ಎಂಬ ಉತ್ತರವಿಲ್ಲದ ನಿನ್ನನ್ನೇ ಪ್ರಶ್ನಿಸಿ ಮುನ್ನೆಡೆಯುತ್ತೇನೆ.

ದೇಹ ಹರಿಯದ ಹೊರತು ಬವಣೆಗೆ ಹೊಣೆಯಾರು ನೀನೋ? ನಾನೋ

ನಾಜೀವಿ

# ನನ್ನಜ್ಜ ಮತ್ತು ಗಾಂಧಿ ಟೋಪಿ

ನಿನ್ನೂರಿನ ನೆತ್ತಿಯ ಮೇಲೆ ಮೋಡವೊಂದು ಕಂಡು
ನನ್ನಜ್ಜ ನನ್ನೂರಿನ ತನಕ ತಲೆ ಮೇಲೆ ಗಾಂಧಿ
ಟೊಪ್ಪಿಗೆ ಮೇಲೆ ಕೈಯಿಟ್ಟು ನೋಡುತ್ತಾ
ಬಂದಿದ್ದೇ ಆಯಿತು.

ಈ ಮೋಡವೋ ಮದ ತುಂಬಿದ ಕರಿಯಂತೆ
ಹೇಗೆ ಬಂಗಾಳಕೊಲ್ಲಿ ಕಡೆ ಸರಿಯಿತು
ನೋಡು.
ಛೇ ಆಗ ಇದ್ದ ಮೋಡದ ಚಿತ್ರಣ ಈಗಿಲ್ಲ
ಯಾವ ಕಲಾವಿದನ ಕಣ್ಣಿರುಳಿನಲಿ ಅರಳಿದ್ದ
ಕುಂಚವೋ ಅಂದುಕೊಂಡೆ.

ಕೆರೆಯ ನೀರಿನಲ್ಲೂ ಅದರದ್ದೇ ಚಿತ್ರಣ.
ಹೀಗೆ ಮೂಡುತಿದೆ.
ಬೆನ್ನ ಹಿಂದಿನ ನೆರಳಿನಂತೆ.
ಹಾಗೆ ಸರಿಯುತಿದೆ.
ಮೋಡದಲ್ಲಿ ಬೀಳುವ ಉಲ್ಕೆಗೆ
ನಿನ್ನ ಗೆಳೆಯನಿಗೆ ಬುದ್ಧಿ ಹೇಳು
ಎಂದು ಕೇಳಿಕೊಂಡಿದ್ದು ಇದೆ.

ಓ ಇಂದು ಮಳೆ ಬರಬಹುದು
ಎಂದು ಕಾದಿದ್ದು ಇದೆ,
ಅರೆ, ಯಾರದ್ದೋ ಚಕ್ರ
ನವಿಲು ಇಂದ್ರನ ವಾಹನ
ನಾರಾಯಣ, ನಾರಾಯಣ




ಇವೆಲ್ಲಾ ಮೋಡದ ಹಿಂದಿನ ಕಥೆಯ ಚಿತ್ರಗಳು
ಇದು ಕೂಡಾ ಕುಂಚದಲ್ಲಿನ ಕಲ್ಪನೆಯೋ
,ಇರಬಹುದೇನೋ ಅವರ ಕದನಗಳೋ
ಮೋಡದ ಮೇಲೆಯೇ ಅಥವಾ ಅದರ ಹಿಂದೆಯೇ?

ಮತ್ತೆ ಅಜ್ಜನ ವರಸೆ ಬದಲಾಗಲಿಲ್ಲ
ಗಾಂಧಿ ಟೊಪ್ಪಿಗೆ ಧರಿಸಿ ಮೋಡ
ದಿಟ್ಟಿಸುತ್ತಲೇ ನಡೆದ.
ಆದರೆ ಟೊಪ್ಪಿಗೆ ಮೇಲೆ ಕೈಯಿಡುವುದ
ಮರೆತ ಗಾಂಧಿ ಟೊಪ್ಪಿಗೆ ಕೇಳಬೇಕೆ
ಕೆಳಗೆ ಬಿದ್ದು ಮಣ್ಣು ಪಾಲಾಯಿತು.

ಅದನ್ನು ಕೊಡವಿ ಹಾಕಿಕೊಂಡ ಮೋಡಗಳು
ಮಾತ್ರ ತಮ್ಮ ವರಸೆ ಬದಲಾಯಿಸಲಿಲ್ಲ
.ಗಾಂಧಿ ಟೊಪ್ಪಿಗೆ ಈಗಲೂ ಇದೆ
ಆದರೆ ನನ್ನಜ್ಜ ಮಾತ್ರ ಇಲ್ಲ.
ಮೋಡಕ್ಕಿರುವಷ್ಟೇ ಹಟದವನು
ಮೋಡ ದಿಟ್ಟಿಸುತ್ತಲೇ ನಡೆದು ಬಿಐ

ಮಂಜುಳ ಜೆ.ಎಚ್
ವಿಜಯಪುರ



Azim Premji Foundation

# ಶೋಧ

ರಾಘವೇಂದ್ರ ಹೇರ್ಳೆ ಜಿ.

*ರೆಕ್ಕೆ-ಬೇರುಗಳ ಅನಂತ ಅಂತರದ ವಿಸ್ತಾರ*

*ನಡುವೆ ತ್ರಿಶಂಕುವಿನಂತೆ ಸಿಲುಕಿ ತೊಯ್ದಾಡುವ ಕುಟುಕುಜೀವ,*

*ನದಿಮೂಲ, ಸ್ತ್ರೀಮೂಲ, ಋಷಿಮೂಲಗಳ ಆಚೆಗೂ*

*ಕೈಚಾಚಿ ಶೋಧಿಸ ಹೊರಟಿರುವೆ ನಾ ಅಸ್ಮಿತೆಯ ಹೆಜ್ಜೆಗುರುತಿಗಾಗಿ; ಹೆಜ್ಜೆ ಮೂಡದ ಹಾದಿಯಲ್ಲಿ.*

*ಸಿಂಧುವಿನಿಂದ ಬಿಂದುವಿಗೆ! ಅಗಣಿತದಿಂದ ಶೂನ್ಯಕ್ಕೆ !*

*ಹುಚ್ಚು ಸಾಹಸದ ಮೂರ್ಖಶಿಖಾಮಣಿಯಂತೆ; ಅರೆಬರೆ ಪಂಡಿತನ ಅಹಂನ ಪ್ರದರ್ಶನದಂತೆ,*

*ತುದಿಮೊದಲುಗಳ ಗೋಜಲುಗಳ ಮಜಲುಗಳ ನಡುವೆ ಮಸುಕಾದ ನನ್ನತನಕೆ*

*ಒಂದಿಷ್ಟು ಸಾಂತ್ವನ ಹೇಳುತ್ತಲೇ ನನ್ನೊಳಗನ್ನು, ಒಳಗಿನ ವಿಕಾರಗಳನ್ನು ಬೆತ್ತಲೆಗೊಳಿಸುವುದಕ್ಕೆ !*

*ಬಾದರಾಯಣ ಸಂಬಂಧಗಳ ಟೊಳ್ಳುತನಗಳಿಂದ ಕಳಚಿಕೊಂಡು ಹಗುರವಾಗುವುದಕ್ಕೆ,*

*ವ್ಯವಸ್ಥೆಯ ಬಾಲಂಗೋಚಿಗಳ ತೆಕ್ಕೆಯಿಂದ ಬಿಡಿಸಿಕೊಳ್ಳುವುದಕ್ಕೆ!*



ಇಷ್ಟಕ್ಕೂ ನಾನು ಯಾರು ?

ನಗರಮುಖಿಯೇ ? ಗ್ರಾಮಮುಖಿಯೇ ?

ಮನೋಮುಖಿಯೇ ? ಆತ್ಮಮುಖಿಯೇ ?

ಸಿದ್ಧಾಂತಮುಖಿಯೇ ? ಆದರ್ಶಮುಖಿಯೇ ?

ಲೌಕಿಕಮುಖಿಯೇ? ಪ್ರಯೋಗಮುಖಿಯೇ?

ನನಗೇ ಗೊತ್ತಿಲ್ಲದ ಅಪರಿಚಿತನ ಜಾತಕರ್ಮದ ಹಂಗು ನನಗೇಕೆ?

ಹುಟ್ಟು-ಸಾವುಗಳ ವಿರುದ್ಧ ಧ್ರುವಗಳ ಕಡೆಗೆ ನನ್ನದೆಷ್ಟನೆಯ ನಡಿಗೆ?

ಒಳಗಿನಿಂದ ಕಲಕುತ್ತಿರುವುದೇನು? ಹೊರಗಿನಿಂದ ದಬ್ಬುತ್ತಿರುವುದೇನು?

ಭಾವ-ಜೀವಗಳ ಸಾಂಗತ್ಯ, ಲಾಸ್ಯ, ತಂತುಗಳ ಹಿಡಿಕೆ ಶ್ರುತಿ ತಪ್ಪುತ್ತಿರುವುದೇಕೆ ?

ನಡೆಯ ದೋಷವೇ? ನಿಲುಗಡೆಯ ದೋಷವೇ? ಆಚರಣೆಯ ದೋಷವೇ? ಬಲ್ಲವರೆಲ್ಲಿ ?

Azim Premji Foundation

# ಶೋಧ

ಹೊಟ್ಟೆಪಾಡು, ಹೆಸರು, ಅಧಿಕಾರ, ಪ್ರತಿಷ್ಠೆ, ಸುಖದ ತೆವಲು

ಸಣ್ಣತನ, ವಿಕೃತಿ, ದ್ವೇಷ–ಮತ್ಸರ, ಸುಳ್ಳುಗಳ ಕಂತೆ

ಆತ್ಮರತಿಯ ಮಗ್ಗುಲಲ್ಲೇ ಪಾಪಪ್ರಜ್ಞೆಯ ಹೇಷಾರವ !

ಬಣ್ಣ ಮಾಸಿದರೂ ಮುಗಿಯದ ಹುಲಿವೇಷ !

ಸೂಟು–ಬೂಟು, ಹೇರ್ ಡೈ– ವಿಗ್, ಪ್ರಾಣಾಯಾಮ–
ಏರೋಬಿಕ್ಸ್–ಜಾಗಿಂಗ್, ಡಯಟ್‌ಗಳ ನಡುವೆ

ರೋಗಲೇಪಿತ ದೇಹಕ್ಕೊಂದಿಷ್ಟು ರಿಲ್ಯಾಕ್ಸಿನ ಮುಲಾಮು ಸವರಿ
ಮುದ್ದುಗರೆಯುವ ಚಪಲಚೆನ್ನಿಗರಾಯ!

ಮೌಢ್ಯ, ಅವಕಾಶವಾದಿತನ, ಭಟ್ಟಂಗಿತನದ ಮಗ್ಗುಲಲ್ಲಿ
ವಿಚಾರವಾದದ ಭಾಜಾಬಜಂತ್ರಿ,

ಎಲ್ಲರೊಳಗೊಂದಾಗುವ ಶಾಂತಿಮಂತ್ರದ ಬಾಯಿ ತೆರೆದರೆ ನುಂಗಿ
ನೊಣೆಯುವ ವಿಷದ ಬ್ರಹ್ಮಾಂಡ ದರ್ಶನ,

ಕ್ಷಣಭಂಗುರವಾದ ಬದುಕಿದ್ದರೂ ಕ್ಷಣಕ್ಷಣಕೂ
ಗೋಸುಂಬೆಯಾಗಲೇ ಬೇಕಾದ ಸ್ವಯಂಕೃತ ಅಪರಾಧ!

ಹಿಂತಿರುಗಿ ನೋಡಿದರೆ ಗುರುತೇ ಸಿಗದಷ್ಟು ವಿಚಿತ್ರ, ವಿಕ್ಷಿಪ್ತ, ಕರಾಳ
ಮುಖ !

ಪೊರೆ ಕಳಚಲೇ ? ಕಳಚಲಾಗದಷ್ಟು ಬ್ರಹ್ಮಕಪಾಲದಂತೆ ಮೆತ್ತಿಕೊಂಡಿದೆ,

ಮುಖವಾಡ ಕಿತ್ತೊಗೆಯಲೇ ? ಹಾಕಿದ ಸಾವಿರ ಮುಖವಾಡಗಳ ನಡುವೆ
ಅಸಲಿಮುಖ ಕಾಣೆಯಾಗಿದೆ,

ತಳಮಳ–ಸಂಕಟವ ಅರುಹಲೇ? ನಿತ್ಯವೂ ಸಾಯುವವರಿಗೆ ಅಳುವವರು
ಯಾರು ?

ಬಟಾಬಯಲಿನಲ್ಲಿ ಎಲ್ಲವನೂ ಹರವಿ ಬೆತ್ತಲೆಯಾಗಲೇ ? ದ್ರೌಪದಿಯ
ಸೀರೆಯಂತೆ ಕುಂಟುನೆಪಗಳು ರಾಶಿಬಿದ್ದಿವೆ,

ಪಲಾಯನವಾದಿಯಾಗಿ ತಲೆ ಮರೆಸಿಕೊಳ್ಳಲೇ ? ಬೇರಿನಿಂದ ರೆಕ್ಕೆಯವರೆಗೆ
ಅಖಿಲಜೀವಜಾತಗಳೂ ಕಂದಾಯ ಕೇಳುತ್ತಿವೆ,

ನಿರ್ಲಿಪ್ತನಾಗಿ ಸ್ಥಿತಪ್ರಜ್ಞನಾಗಿ ಬಿಡಲೇ ? ಕಂತೆ ಒಗೆಯುವ ತನಕ ಲೆಕ್ಕಗಳು
ಚುಕ್ತವಾಗದೆ ಉಳಿದಿವೆ,

ಬಂಡಾಯವೇಳಲೇ ? ಚರಿತ್ರಹೀನರ ಜೋಲುಮೋರೆಗಳು ನನ್ನೆಡೆಗೆ
ಕೈತೋರಿಸಿ ಮುಸಿಮುಸಿ ನಗುತ್ತಿವೆ,

ಸ್ವಗತದೊಳಗೆ ಕಳೆದುಹೋಗಲೇ? ಒಳಗಿನ ಯಾವದನಿಗಳೂ ಕೇಳದಷ್ಟು ಕಿವಿ
ಕಿವುಡಾಗಿದೆ; ಕಣ್ಣು ಕುರುಡಾಗಿದೆ,

ಪಶ್ಚಾತ್ತಾಪ ಪಡಲೇ ? ಪಡುಪಡುತ್ತಲೇ ಮತ್ತೊಂದಿಷ್ಟು ಅನಾಹುತಗಳನು
ಗುಡ್ಡೆ ಹಾಕಿಕೊಳ್ಳುವೆ,

ಎಲ್ಲ ಮರೆತು ಹೊಸಜೀವನ ಆರಂಭಿಸಲೇ? ಭೂತದ ಉಸುಕಿನಲಿ ಹುದುಗಿ,
ಭವಿಷ್ಯದ ಹಗಲುಗನಸಿನಲಿ ತೇಲುತ್ತಿರುವೆ.

ಪ್ರತಿಬಿಂಬ–ಗತಿಬಿಂಬಗಳ ದೊಂಬರಾಟದಲಿ

ಸಾಕ್ಷಿಪ್ರಜ್ಞೆ ಉಸುರಿದ ಯಕ್ಷಪ್ರಶ್ನೆಗೆ ಬೆನ್ನುಹಾಕಿ ಹುಂಬನಂತೆ ಇನ್ನೂ
ನಡೆಯುತ್ತಲೇ ಇದ್ದೇನೆ...

“ ನೀನಾರಿಗಾದೆಯೋ ಎಲೆ ಮಾನವಾ”?????

ರಾಘವೇಂದ್ರ ಹೇರ್ಳೆ ಜಿ.

...a space of our own

# ಆ ದಿನಗಳು

ಕಳೆದ ನೆನಪುಗಳ ಬೆನ್ನ ಹತ್ತಿ ಹೋದ ಮನಸ್ಸು......

ಆದರೂ ಸಿಗುತ್ತಿಲ್ಲ ಅಂದಿನ ಸುಂದರ ಸಿಹಿ ಸೊಗಸು.....

ನಾ ಸಂಭ್ರಮಿಸಿದ ನನ್ನ ಆ ಬಾಲ್ಯದ ದಿನಗಳನ್ನು

ಈ ಶಾಲಾ ದಿನದ ಅನುಭವಗಳಿಂದ ಮತ್ತೆ ಮರುಕಳಿಸುತ್ತಿವೆ

ನಾ ಕಳೆದ ಆ ದಿನಗಳ ಅದ್ಭುತ ಕ್ಷಣಗಳು

ನಾ ಸವಿದ ಆ ದಿನಗಳ ಸಿಹಿಯಾದ ಅನುಭವಗಳು

ನಾ ಕಂಡ ನನ್ನ ಸ್ನೇಹಿತರ ಮನಸ್ಸುಗಳು

ನಾ ಅತ್ತ ನಾ ನಕ್ಕ ಆ ಸಮಯಗಳು.....

ಅಬ್ಬಾ ನಿಜಕ್ಕೂ ಅದ್ಭುತ ಆ ನಮ್ಮ ಬಾಲ್ಯದ ಜೀವನ......

ಅದನ್ನು ಕೊಟ್ಟ ಬದುಕಿಗೆ ಹೇಳಬೇಕು ಒಂದು ನಮನ.....




ವರ್ಷಿತ ಕೆ , ಮಂಡ್ಯ

...a space of our own

# ಮಹಾದಾ(ತಾ)ಯಿ

ಕಾದಿಹರು ಮಕ್ಕಳು ಸ್ವಾಗತಿಸಲು ನಿನಗೆ
ಹೂವು ಹಣ್ಣು ಹೊಸಸೀರೆಯನಿಡಿದು,
ತಡವಾಯಿತಲ್ಲ ಅವ್ವ ಮುನಿಸೇನು ನಿನಗೆ?
ಜೀವದಾತೆಯೆ ಬಾ, ಬಾಯಾರಿ ಬಾಗಿಲಲಿ
ಕಾದಿಹೆವು ನಿನ್ನ

ಅಟ್ಟಾಡಿದರಮ್ಮ ನಡುಬೀದಿಯಲಿ ನಮ್ಮ
ಬಿಟ್ಟೋಡಿದೆವಮ್ಮ ಊರಾಚೆ ದೂರ
ಬಿಡಲಿಲ್ಲ ಅಪ್ಪ ಎಳೆತಂದ ಸೆರೆಗೆ
ಮರೆತಿಲ್ಲ ನಿನ್ನ ಬಾಬೇಗ ಮನೆಗೆ

ಹಸಿರು ಸೀರೆಯನುಟ್ಟು ಓಡೋಡಿ ಬರುತಿದ್ದೆ
ಕಂದಾ!
ತಡೆಹಾಕಿದರು ಸೋದರರು
ಸರಪಂಚರೆದುರು ನಿಂತು ಹೇಳಿದರು
ಸ್ವಾತಂತ್ರ್ಯವಿಲ್ಲ ನಿನಗ ಗಡಿದಾಟಬೇಡ
ಎಂದು

ಕೈಮುಗಿದು ಪ್ರೀತಿಯಲಿ ಗೋಗರೆದೆವವ್ವ
ಅಯ್ಯೋ, ಬೀದಿಯಲಿ ಗೋಳಾಡಿ ಚೀರಿದೆವು
ನಿನಗ
ಮನೆಯೊಡೆಯ ಬಿಡಲಿಲ್ಲ ಹೋರಾಡದಿರಿ ಎಂದ
ಹಠದಲ್ಲಿ ಕರುಣಿಸಿದ ಬಂಧನದ ಭಾಗ್ಯ

ಅಂಜಿಕೆಯಲಿ ಕರುಣಿಸಿಹರು ಬಿಡುಗಡೆಯ ಭಾಗ್ಯ
ಹತ್ತಿಕ್ಕಿಹರು ನಮ್ಮ ಹೋರಾಟದ ಕೂಗ
ಕಿಚ್ಚಿಹುದು ಅವ್ವ ಎದೆಯೊಳಗೆ ಇನ್ನ
ಕಿಚ್ಚಾರುವ ಮುನ್ನ ಮಹಾದಾ(ತಾ)ಯಿ ಆರಿಸು
ಶಾಂತಿಯಲಿ ದಣಿವ




**ಡಾ. ನಾಗೇಶ ಕೆ.ಟಿ,**

**ಮಂಡ್ಯ**

Azim Premji Foundation

"Teachers can change lives with just the right mix of chalk and challenges."




ಹರಿಪ್ರಿಯ

## ತರಗತಿಯನ್ನು ಹೀಗೂ ನೋಡಬಹುದೇ?

ನಿಮ್ಗೆಲ್ಲಾ ನನ್ನ ಕಳೆದ ಸಂಚಿಕೆಯ ಬರೆವಣಿಗೆ ಇಷ್ಟ ಆಗಿದೆ ಅನ್ಕೊಂಡಿದ್ದೀನಿ. ಅದ್ಕೆ ಈ ಬಾರಿಯೂ ನಿಮ್ಗೆಲ್ಲಾ ಅದೇ ಶಾಲಾ ದಿನಗಳ ಅನುಭವದ ಇನ್ನೊಂದ್ ಕಥೆ ಹೇಳನ ಅನ್ಕೊತಿದ್ದೀನಿ, ಹೇಳ್ಲಾ?? ಕೇಳಿ ಮತ್ತೆ,

ಶಾಲೆ ಅಂದ್ರೆ ನಮ್ ಕಣ್ಮುಂದೆ ಮಕ್ಕಳು, ಟೀಚರ್, ಆಟ, ಬಿಸಿ ಊಟ, ಕಲಿಕೆ, ಖುಷಿ ಹೀಗೆ ಒಂದು ಚಂದದ ಚಿತ್ರಣ ಕಟ್ಕೊಬಿಡುತ್ತೆ ಅಲ್ವಾ, ಆದ್ರೆ ಮೊದಲ್ ಮೊದಲಿಗೆ ಶಾಲಾ ಭೇಟಿಯನ್ನು ಶುರುಮಾಡಿದಾಗ ನಾನೂ ಹಿಂಗೇ ಅನ್ಕೊಂಡಿದ್ದೆ. ಆದ್ರೆ ನಂತರದ ದಿನಗಳಲ್ಲಿ ಶಾಲೆ ಅಂದ್ರೆ ಏನು? ಎಂದು ನೋಡಿದ್ರೆ ಮೇಲಿನಾಂಶಗಳಿಗಿಂತ ಹೆಚ್ಚಾಗಿ ಟೀಚರ್ ಹೇಳ್ದಂಗೆ ನಡ್ಕೊಳೊ ಮಗುವಿನ ಶಿಸ್ತು, ಇಷ್ಟ ಇಲ್ದೆ ಹೋದ್ರು ಆಕ್ಪೇಕಾಗಿರೋ ಸಮವಸ್ತ್ರ, ಪಾಠ, ಪರೀಕ್ಷೆ ಈ ತರಹದ ಅಂಶಗಳೇ ಹೆಚ್ಚು ಮಕ್ಕಳಮೇಲೆ ಪ್ರಭಾವ ಬೀರುತ್ತಿರುವಂತೆ ಕಾಣುತ್ತದೆ.



ತರಗತಿ ಅಭ್ಯಾಸಕ್ಕೆ ತೊಡಗಿಕೊಳ್ಳೋದಕ್ಕೂ ಮುಂಚಿ-ತವಾಗಿಯೇ ಮಕ್ಕಳ ಈ ತರಹದ ಮನಸ್ಥಿತಿಯನ್ನು ಮೊದಲೇ ಅರಿತುಕೊಂಡದ್ದು ನನಗೆ ಬಹಳ ಉಪಯುಕ್ತವಾಯಿತು. ನಾನ್ ಎಷ್ಟೋ ಸಾತಿ ಹೇಳ್ಕೊಂಡಂಗೆ ನಮ್ ಭಾಷಾ ತರಗತಿಯನ್ನು ಉಳಿದ ತರಗತಿಗಳಿಗೆ ಹೋಲಿಸಿಕೊಂಡ್ರೇ ಏನೋ ಒಂಥರಾ ವಿಭಿನ್ನ ಅನ್ನೋಂಗೆ ಕಾಣ್ತಿತ್ತು ಯಾಕಂದ್ರೆ ನಮ್ಮಲ್ಲಿ ಶಿಕ್ಷಕಿ ವಿದ್ಯಾರ್ಥಿ ಅನ್ನೋ ಭಾವನೆ ಇರ್ಲಿಲ್ಲ, ಬದಲಾಗಿ ನಾವೆಲ್ರೂ ಇಲ್ಲಿ ಹೊಸ ಹೊಸದನ್ನು ಕಂಡುಕೊಂಡು ಕಲಿಯಲು ಬಂದವರೇ ಆಗಿದ್ದರಿಂದ ನಾವು(ಮಕ್ಕಳನ್ನೊಳಗೊಂಡ ನಾನು) ಯಾವಾಗ್ಲೂ ಒಂದಲ್ಲಾ ಒಂದು ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ರಿಂದ ನಮ್ಮ ಭಾಷಾ ತರಗತಿಯು ಯಾವಾಗ್ಲೂ ಬಿಡುವೇ ಇಲ್ಲದಂತಿತ್ತು. ಯಾರ ಸಹಾಯವನ್ನೂ ಬಯಸದೇ ಮಕ್ಕಳೇ ಕ್ರಿಯಾಶೀಲವಾಗಿ ಹೆಚ್ಚು ಭಾಗಿಯಾಗ್ತಿದ್ದದ್ರಿಂದ ಅದೊಂತರ ಮಕ್ಕಳದೇ ಸಾಮ್ರಾಜ್ಯವಾಗಿತ್ತು. ಅಲ್ಲಿ ಚಿತ್ರ ಬಿಡಿಸಲು ಒಂದುದಿನ, ಪಾಠ ಓದಲು ಒಂದುದಿನ, ಆಟ ಆಡಲು ಒಂದು ದಿನ ಅನ್ನೊಂಗೆ ಟೈಮ್ ಟೇಬಲ್ ಇರ್ತಿರ್ಲಿಲ್ಲ ಒಂದೇ ದಿನದಲ್ಲಿ ಇವೆಲ್ಲವೂ ನಡೀತಿತ್ತು.

Azim Premji Foundation

## ತರಗತಿಯನ್ನು ಹೀಗೂ ನೋಡಬಹುದೇ?

ಹೀಗೊಂದು ಮಾತಿದೆ **"**Everybody says teaching is so easy just like walking in a park… But, only teachers know that the park is the JURASSIC PARK with of variety of dinosause: ಅಂದ್ರೆ ನಾನಿಲ್ಲಿ ಮಕ್ಕಳನ್ನ ಡೈನೋಸರ್‌ಗೆ ಹೋಲಿಸ್ತಾ ಇದ್ದೀನಂತ ತಪ್ಪ್ ತಿಳ್ಕೋಬೇಡಿ. ಇಲ್ಲ, ನಾವೇ ಅದೆಷ್ಟೋ ಸಂದರ್ಭದಲ್ಲಿ ಹೇಳಿರ್ತೀವಿ ಶಿಕ್ಷಕರಿಗೆ ಏನೂ ಕಷ್ಟದ್ ಕೆಲ್ಸಾ ಇರಲ್ಲ ಕ್ಲಾಸ್‌ಗೆ ಹೋಗೋದು ಪಾಠ ಮಾಡೋದ್ ಅಷ್ಟೇ, it's very easy job ಅಂತೆಲ್ಲಾ. ಆದ್ರೆ ಒಬ್ಬ ಶಿಕ್ಷಕಿಯಿಂದಾನೇ ಆ JURASSIC PARK ನಂತಹ ತರಗತಿಯನ್ನೂ ಒಂದು ಚಂದದ ಪ್ರಕೃತಿ ತಾಣಗೊಳಿಸಲು ಸಾಧ್ಯವಾಗೋದು. ನಾನು ನನ್ನ ತರಗತಿ ಕಲಿಕೆಯ ಸಂದರ್ಭದಲ್ಲಿ ಇತಂದ್ ಅದೆಷ್ಟೋ ಪ್ರಯೋಗಗಳನ್ನು ಮಾಡಿದ್ದೇನೆ. ಮಕ್ಕಳನ್ನು ಮಾಮೂಲಿನಂತೆ ಕಂಟ್ರೋಲ್ ಮಾಡುವ ಸಲುವಾಗಿ ಅಲ್ಲ ಬದಲಾಗಿ ನಾನೇಳೋಕ್ ಹೊರಟಿರುವ ವಿಚಾರಕ್ಕೆ ಅವರನ್ನು ಆಸಕ್ತಿದಾಯಕವಾಗಿ ಎಂಗೇಜ್ ಮಾಡೋಕೆ. ಮೊದಲಿಗೆ ನಾನ್ ತರಗತಿ ಪ್ರವೇಶ ಮಾಡಿದಾಗ ಒಂದೊಂದು ಮಗು ಒಂದೊಂದು ಚಟುವಟಿಕೆಯಲ್ಲಿ ತೊಡಗಿರುತಿತ್ತು ಒಂದು ಚಿತ್ರ ಬಿಡಿಸ್ತಿದ್ರೆ ಇನ್ನೊಂದು ಬ್ಯಾಗಲ್ಲಿ ಜೋಡಿಸಿದ್ದ ಬುಕ್ಸ್‌ನೆಲ್ಲಾ ಮತ್ತೊಂದ್ ಸಾತಿ ಕಿತ್ತು ಹೊದ್ರಿ ಮಿಸ್ ಇದು ಇಂಗ್ಲೀಷ್ ಬುಕ್ ಇದು ಸಮಾಜ ಬುಕ್ ಮತ್ತಿದು ಗಣಿತ ಅಂತಾ ಕಿಳೋದು ಜೋಡಿಸೋದು ಮಾಡ್ತಾ ಇರ್ತಿತ್ತು. ಇನ್ನೊಂದು ಕಡೆ ನೋಡಿದ್ರೆ ಇನ್ನೊಂದ್ ಮಗು ಮತ್ತೇನನ್ನೋ ಕಳ್ಕೊಂಡು ನೀನ್ ತಗೊಂಡ್ಯಾ ನೀನ್ ತಗೊಂಡ್ಯಾ ಅಂತ ಎಲ್ಲಾರ ಬ್ಯಾಗನ್ನು ಪೋಲಿಸಿನವರಂತೆ ಹುಡುಕ್ತಾ ಇತ್ತು. ಇನ್ನೊಂದು ತನಗಿದ್ಯಾವುದ ಪರೀವೇ ಇಲ್ಲ ಎಂಬಂತೆ ಅಪ್ಪ ಕೊಡಿಸಿದ ಬಣ್ಣ ಬಣ್ಣದ ಪೆನ್ಸಿಲ್‌ಗಳನ್ನು ತನ್ನೆಲ್ಲಾ ಸ್ನೇಹಿತರಿಗೆ ತೋರಿಸ್ಕೊಂಡು ಆನಂದ ಪಡುತ್ತಿರುತ್ತಿತ್ತು. ಹೀಗೆ ತರಗತಿಯಲ್ಲಿ ಒಂದಕ್ಕಿಂತ ಒಂದು ಮಗು ಅನನ್ಯ ಎಂಬ ತತ್ವವನ್ನು ಸಾರುತ್ತಿರುತ್ತಿದ್ದವು ಈ ತತ್ವವನ್ನೇ ಶಿಕ್ಷಕರಾದ ನಾವೆಲ್ಲಾ ಜೀವಂತ ಗೊಳಿಸಬೇಕಾಗಿರುವುದು.

ನಾನ್ ಮಾಡಕೋಗಿದು ಸಹ ಅದನ್ನೇ ಮಕ್ಕಳಲ್ಲಿ ಆ ವೈವಿಧ್ಯವನ್ನು ಮೊದಲು ಅರ್ಥೈಸಿಕೊಂಡು ಆ ನಂತರದಲ್ಲಿ ಅವರವರ ಆಸಕ್ತಿಯ ವಿಷಯಗಳನ್ನೇ ಇನ್ನೊಬ್ಬರಿಗೆ ತೊಂದರೆಯಾಗದಂತೆ ಮಾಡಿ ಅಂತ ಹೇಳಿದ್ದು ಮಕ್ಕಳಿಗೆ ಏನೋ ಹೊಸತನ ಸಿಕ್ಕಂ–ತಾಯಿತು 'ಎಲ್ಲಾ ಮಿಸ್‌ಗಳೂ ಏನ್ ಮಾಡ್ತಿದ್ದೀರಾ ನಿಮ್ಮೆಲ್ಲಾ ಕೆಲ್ಸಗಳನ್ನೂ ಮುಚ್ಚಿಟ್ಟು ಪಾಠ ಮಾಡ್ತಿರೋ ಕಡೇಗ್ ಗಮನಹರಿಸಿ ಅಂತ ಹೇಳ್ತಿದ್ದಾಗ ನಾನೊಬ್ಳು ಹೋಗಿ ನಿಮ್ಗೇನೇನ್ ಮಾಡೋಕ್ ಇಷ್ಟನೋ ಅದ್ನ ಮೊದಲು ಮಾಡಿಮುಗಿಸಿ ಆಮೇಲೆ ನಾನ್ ಹೇಲೋಕ್ ಬಂದಿರೋ ವಿಚಾರನ ಮಾತಾಡನಾ ಅಂದಾಗ ಆ ಮಕ್ಕಳಿಗೆ ನಮ್ಮ ತರಗತಿಗೆ ಹಿಂದಿನದಕ್ಕಿಂತ ಏನೋ ವಿಶೇಷತೆ ಮಾಡಿದಂತಾಗುತ್ತಿತ್ತು. ಈ ಕಾರಣದಿಂದ ಮಕ್ಕಳ ಆಸಕ್ತಿಯೂ ಫಲಿಸಿದಂತಾಗುತ್ತಿತ್ತು ಶಿಕ್ಷಕರು ಹೇಳೋಕ್ ಹೊರಟ ಉದ್ದೇಶವೂ ಫಲಿಸುತ್ತಿತ್ತು. ಇದೇ ಅಲ್ವಾ ಮಕ್ಕಳು ಶಿಕ್ಷಕರಿಂದ, ಶಾಲೆಯಿಂದ ನಿರೀಕ್ಷಿಸುವ ಸ್ವಾತಂತ್ರ್ಯ.



# ನಾನು ಮೋಟಾರ್ ಬೈಕ್ ಕಲಿತ ಕ್ಷಣಗಳು

ಅದು ನೆನಪು. ಕೌತುಕವನ್ನು ಹೊಂದಿದ್ದ ದಿನಗಳು. ನಮ್ಮ ಮನೆ ಅತ್ತ ಕೇರಳವೂ ಅಲ್ಲದ, ಕರ್ನಾಟಕವೂ ಅಲ್ಲದ ಭೂಪ್ರದೇಶದಲ್ಲಿತ್ತು. ನಾವು ಹೊಂದಿದ್ದ ಭೂಮಿಯ ಕೊನೆಯ ಭಾಗವೇ ಕೇರಳ ಮತ್ತು ಕರ್ನಾಟಕ ರಾಜ್ಯದ ಅಧಿಕೃತ ಗಡಿಭಾಗ. ಈ ಸ್ಥಳ ದಟ್ಟ ಕಾಡಿನಿಂದ ಕೂಡಿದ್ದು, ಇಳಿಜಾರಾದ ಬೆಟ್ಟಗಳನ್ನು ಹೊಂದಿದೆ. ಎರಡು ಬದಿಯ ಬೆಟ್ಟಗಳ ನಡುವಿನ ಓಣಿಯಾದ ಪ್ರದೇಶದಲ್ಲಿ ಹರಿಯುವ ನದಿ ದಡದಲ್ಲಿ ಒಂದಷ್ಟು ಕೃಷಿ ಮಾಡಿ ಬದುಕು ಸಾಗಿಸುತ್ತಿದ್ದರು ನನ್ನ ಅಜ್ಜ. ಅದನ್ನೇ ಮುಂದುವರೆಸಿಕೊಂಡು ಬಂದಿದ್ದರು ನನ್ನ ತಂದೆ ಮತ್ತು ತಾಯಿ. ಬೆಳಗ್ಗೆ ಎದ್ದು ನೋಡಿದರೆ ಬೆಟ್ಟದಿಂದ ಇಣುಕುವ ಸೂರ್ಯ ಮಾತ್ರ ನಮ್ಮ ಅಂದಿನ ಆಗಂತುಕ.

ಹೊರಪ್ರಪಂಚ ಎಂದರೆ ಮರಗಿಡಗಳು ಪುಟ್ಟ ಪ್ರಾಣಿ-ಪಕ್ಷಿಗಳೇ ಆಗಿದ್ದವು. ಬೆಟ್ಟವನ್ನು ಸವರಿ ಒಂದಷ್ಟು ರಾಗಿ, ನವಣೆಗಳನ್ನು ಬೆಳೆದಿದ್ದ ನೆನಪು ಇಂದಿಗೂ ಇದೆ. ನಂತರ ಆ ಜಾಗದಲ್ಲಿ ಗೇರುಬೀಜ ಗಿಡಗಳನ್ನು ಹಾಕಿ, ಬಂದ ಫಸಲನ್ನು ಹೆಕ್ಕಿ, ಚೀಲಗಳಿಗೆ ತುಂಬಿಸುವುದೇ ನಮ್ಮ ಬಲುದೊಡ್ಡ ಕಾಯಕ. ಈಗ ಆ ಜಾಗಗಳನ್ನು ರಬ್ಬರ್ ಗಿಡಗಳು ಆಕ್ರಮಿಸಿಕೊಂಡಿವೆ. ಹರಿಯುವ ಸಣ್ಣ ನದಿಗೆ ಅಡ್ಡವಾಗಿ ಕಲ್ಲು, ಅಡಿಕೆ ಮರದ ಸೋಗೆ, ತೆಂಗಿನ ಮಡಲುಗಳನ್ನು ಅಡ್ಡವಾಗಿ ಕಟ್ಟಿ ಬೇಕಾದಷ್ಟು ನೀರನ್ನು ತೋಟಕ್ಕೆ ಹರಿಯಬಿಡುವುದು ನಮ್ಮ ಅಂದಿನ ಆಟದ ಸಮಯದ ಕಾಯಕವಾಗಿತ್ತು. ಆಗೊಮ್ಮೆ, ಈಗೊಮ್ಮೆ ಸಮಯ ಸಿಕ್ಕಾಗ ಇಳಿಜಾರು ಪ್ರದೇಶದಿಂದ ಜಾರುವುದು. ತಂದೆ-ತಾಯಿಯರ ಆರು ಮಕ್ಕಳು ಹೀಗೆ ಜಾರಿ ಚಡ್ಡಿ ಹರಿದುಕೊಂಡು ಬಂದಾಗ ಸಿಗುವ ಪೆಟ್ಟಿಗೆ ಹೆದರಿದ್ದೂ ಸಹಜವೇ ಆಗಿತ್ತು. ನಂತರ ಅಡಕೆ ಹಾಳೆಯನ್ನು ಬಳಸಿ ಜಾರು ಬಂಡೆ ಮಾಡಿದ್ದೂ ಆಯಿತು. ಅಡಕೆ ಹಾಳೆಯಲ್ಲಿ ಕುಳಿತುಕೊಳ್ಳಲು ಪೈಪೋಟಿ ಇದ್ದರೆ, ಎಳೆಯಲು ಹಿಂದೇಟು ಹಾಕುತ್ತಿದ್ದೆವು. ಗಲಾಟೆ ಜೋರಾದಾಗ ಅಪ್ಪನ ದರ್ಶನವಾಗುತ್ತಿತ್ತು. ಅದೂ ನಾಗರಬೆತ್ತದ ಜೊತೆಗೆ.

ಇಂತಹ ಸಂದರ್ಭಗಳ ನೆನಪಿನ ಮೊಗೆಯನ್ನು ಹೊತ್ತು ದೊಡ್ಡವರಾದೆವು. ದೊಡ್ಡವರಾಗುತ್ತಿದ್ದ ಭ್ರಮೆಯಲ್ಲಿದ್ದಾಗಲೇ ತಂದೆಯನ್ನು ಕಳೆದುಕೊಳ್ಳಬೇಕಾಯಿತು. ತೀವ್ರ ಹೃದಯ ಸಂಬಂಧಿ ಖಾಯಿಲೆಯಿಂದ ಸುಮಾರು ಹದಿನೈದು ವರ್ಷ ನರಳಿದ ತಂದೆ ಅಸುನೀಗಿದ್ದರು. ನನ್ನ ಅಣ್ಣ ಸಹಜವಾಗಿ ಮನೆಯ ಮುಂದಾಳತ್ವ ವಹಿಸಬೇಕೆಂದು ಎಲ್ಲರ ಅಭಿಲಾಷೆ ಆಗಿತ್ತು. ಅಮ್ಮನ ಕುರುಡು ಪ್ರೀತಿಯೂ ಅತ್ತ ಕಡೆ ವಾಲಿತ್ತು. ದೊಡ್ಡಪ್ಪ-ಚಿಕ್ಕಪ್ಪನವರೂ ಅನುಮೋದಿಸಿದರು. ಆ ವೇಳೆಗೆ ದೊಡ್ಡವರಾದಾಗ ಸಹಜವಾಗಿ ಹುಟ್ಟಿಕೊಂಡ ಆಸೆಗಳಿಗೆ ಅಣ್ಣನೂ ಹೊರತಾಗಿರಲಿಲ್ಲ. ಶಿಕ್ಷಣಕ್ಕೆ ಗುಡ್‌ಬೈ ಹೇಳಿದ. ನನ್ನನ್ನು ಮಾತ್ರ ಹೆಚ್ಚು ಓದಿಸಬೇಕೆಂಬ ಆಸೆ ಅವನಲ್ಲಿ ಇಮ್ಮಡಿಗೊಳ್ಳುತ್ತಿತ್ತು. ಇಮ್ಮಡಿಗೊಳ್ಳುತ್ತಿರುವ ಆಸೆ ಅವನಲ್ಲಿ ಮಾತ್ರ ಅಲ್ಲ, ಅಮ್ಮನಲ್ಲಿಯೂ ಪ್ರಕಟಗೊಳ್ಳುತ್ತಿತ್ತು. ಆದರೆ ಚಿಕ್ಕಪ್ಪನವರಿಗೆ ಯಾಕೋ ಅದು ಹಿಡಿಸಿರುತ್ತಿರಲಿಲ್ಲ.








## ನಾನು ಮೋಟಾರ್ ಬೈಕ್ ಕಲಿತ ಕ್ಷಣಗಳು,,,

ಅದೊಂದು ದಿನ ಹುಡುಗಾಟವೋ ಏನೋ ಗೊತ್ತಿಲ್ಲ. 5–6 ಮೈಲಿ ದೂರದ ಸ್ನೇಹಿತನೋರ್ವನಿಂದ ಅಣ್ಣ ಬೈಕೊಂದನ್ನು ಪಡೆದುಕೊಂಡು ಬಂದಿದ್ದ. ಬೈಕ್ ಬಂದಾಗ ವಿರೋಧಿಸಿದ್ದವರಲ್ಲಿ ನಾನೂ ಒಬ್ಬನಾಗಿದ್ದೆ..! ನಾಲ್ಕು ಚಕ್ರದ ಜೀಪ್ ಬಿಟ್ಟರೆ ನಮ್ಮ ಮನೆಗೆ ಬೇರೆ ಚಕ್ರ ಹೊಂದಿರುವ ಯಾವ ವಾಹನಗಳು ಬರುವ ಸಂಭವವೇ ಇದ್ದಿಲ್ಲ. ಅಂತಹ ಸಮಯದಲ್ಲಿ ಸ್ವಲ್ಪ ದೂರ ಓಡಿಸಿಕೊಂಡು, ಇನ್ನರ್ಧ ದೂರ ತಳ್ಳಿಕೊಂಡು ಮನೆಗೆ ಬಂದ ಬೈಕ್ ಒಂದು ಹೊಸ ಉತ್ಸಾಹವನ್ನೇ ನನ್ನ ಕಣ್ಣ ಮುಂದೆ ತೆರೆದಿಟ್ಟಿತು. ಆದರೆ ಅಣ್ಣನನ್ನು ಹೇಗೆ ಕೇಳುವುದು.. ನಾನು ಮುಟ್ಟಲೇ ಎಂದು.. ಸ್ವಾಭಿಮಾನದ ಪ್ರಶ್ನೆಯೇ ನಾ ಕಾಣೆ. ಬೆಳಗ್ಗೆ ಎದ್ದೊಡನೆ ಅದನ್ನು ನೋಡುವುದು ಮತ್ತು ಎಂದಿನಂತೆ 2–3 ಕಿ.ಮಿ. ನಡೆದು ಬಸ್ ಬರುವ ಸ್ಥಳಕ್ಕೆ ಬಂದು ಕಾಲೇಜಿಗೆ ಹೋಗುವುದು ನನ್ನ ಕೆಲಸವಾಗಿತ್ತು.

ಒಂದು ದಿನ ಬಸ್‌ಸ್ಟಾಪ್‌ನಿಂದ ಮನೆಗೆ ಸುಮಾರು 2–3 ಕಿ.ಮಿ. ಕಡಿದಾದ ರಸ್ತೆಯಲ್ಲಿ ನನ್ನನ್ನು ಬೈಕ್‌ನಲ್ಲಿ ಕರೆದುಕೊಂಡು ಹೋದ. ಹಿಂಬದಿಯಿಂದ ಕುಳಿತ ನಾನು ಬ್ಯಾಲನ್ಸ್ ತಪ್ಪಿ ಇನ್ನೇನೂ ಬೀಳಬೇಕಾಗಿತ್ತು. ಆದರೆ ಎರಡು ಕಾಲುಗಳನ್ನು ನೆಲಕ್ಕೆ ತಾಗಿಸಿ ಅಣ್ಣ ಬೈಕನ್ನು ನಿಯಂತ್ರಣದಲ್ಲಿರಿಸಿದ್ದ. ಈ ಮಧ್ಯೆ ಕಾರಾಣಾಂತರಗಳಿಂದ ಹಾಗೂ ಸ್ವ–ತಪ್ಪಿನಿಂದ ಅಣ್ಣ ಮನೆ ಬಿಡಬೇಕಾದ ಪ್ರಶ್ನೆ ಉದ್ಭವಿಸಿತು. ಬೈಕ್ ಅನಾಥವಾಗಿ ಬಿದ್ದಿತ್ತು. ಅದನ್ನು ಹೇಗೆ ಸ್ಟಾರ್ಟ್ ಮಾಡುವುದು ಎಂದು ತಿಳಿದಿಲ್ಲ. ಸ್ಟಾರ್ಟ್ ಮಾಡಿದರೆ ಅದು ಓಡುತ್ತದೆ, ಹೇಗಪ್ಪಾ ನಿಯಂತ್ರಣ ಮಾಡುವುದು ಎನ್ನುವುದು ನನ್ನ ಆತಂಕ. ಹಾಗಾಗಿ ನಿಲ್ಲಿಸಿದ್ದ ಬೈಕ್‌ನ್ನು ನಿಧಾನವಾಗಿ ಕೈಯಲ್ಲಿ ತಳ್ಳುತ್ತಾ ಹೋದೆ. ನಿಧಾನವಾಗಿ ಅದರ ಮೇಲೆ ಕುಳಿತುಕೊಳ್ಳಲು ಪ್ರಯತ್ನಿಸಿದೆ. ಇದು ನಡೆದದ್ದು ನಾನು ನನ್ನ ಸ್ನಾತಕೋತ್ತರ ಪದವಿ ಮುಗಿಸಿ ಒಂದು ಪದವಿ ಕಾಲೇಜಿನಲ್ಲಿ ಉಪನ್ಯಾಸಕ ಹುದ್ದೆ ನಿರ್ವಹಿಸುತ್ತಿದ್ದ ಸಮಯದಲ್ಲಿ..! ಸಣ್ಣ ವಯಸ್ಸಿನಿಂದ ಸೈಕಲ್‌ನ್ನೇ ನೋಡಿರದ ಮತ್ತು ಅದನ್ನು ಓಡಿಸಿ ಅನುಭವವಿಲ್ಲದ ನನಗೆ ಬೈಕ್ ಕಲಿಯಲು ಸಾಧ್ಯವಿಲ್ಲ ಎಂದು ಅನೇಕ ಜನ ಹೇಳಿದ್ದರು. ಅವರೆಲ್ಲರೂ ಸ್ನೇಹಿತರೇ ಆಗಿದ್ದರು.

ಮನೆಗೆ ಯಾರು ಬಂದರೂ, ಸುಮಾರು ಒಂದೆರಡು ತಿಂಗಳು ಹೀಗೆ ಬೈಕನ್ನು ಸಾಧಾರಣ ಎತ್ತರದಿಂದ ಇಳಿಜಾರಿಗೆ ಓಡಿಸುತ್ತಿದ್ದೆ. ಇನ್ನೂ ಸ್ಟಾರ್ಟ್ ಮಾಡಲು ಭಯ. ಕ್ಲಚ್, ಗೇರ್ ಮತ್ತು ಬ್ರೇಕ್‌ಗಳ ಪರಿಚಯ ಆಗ ಆಗಿತ್ತು. ಎರಡು ಚಕ್ರ ಇರುವ ಬೈಕ್ ಹೇಗೆ ನೆಲದ ಮೇಲೆ ಓಡುವುದು ಎಂದು ಕೌತುಕ ಹಾಗೇ ಉಳಿದಿತ್ತು. ಕೈಬಿಟ್ಟರೆ, ಬೀಳಬಹುದು ಎನ್ನುವ ಭಯ ಸದಾ ಕಾಡುತ್ತಿತ್ತು. ಕಲಿಯಲೇಬೇಕೆಂಬ ಹಠ ಚಿಗುರೊಡೆಯಿತು. ಎಲ್ಲರೂ ನಿಮಗೆ ಟು–ವೀಲ್ಹರ್ ಓಡಿಸಲು ಬರುವುದಿಲ್ಲವೇ ಎಂದು ಕೇಳಿದಾಗ ತಲೆ ತಗ್ಗಿಸುತ್ತಿದ್ದೆ.. ಮಾನಸಿಕವಾಗಿ.

ಅದೊಂದು ದಿನ, ಆ ಬೈಕ್‌ನ್ನು ಸ್ಟಾರ್ಟ್ ಮಾಡಿ ಮೈನ್ ಸ್ಟ್ಯಾಂಡ್ ಹಾಕಿ ಹಾಗೆ ಇರಿಸಿದೆ. ನಂತರ ಫಸ್ಟ್ ಗೇರ್ ಹಾಕಿ ನಿಧಾನವಾಗಿ ಓಡಿಸಿದೆ. ಅಭ್ಯಸಿಸಿದೆ. ಅದು ಹೇಳಿದ ಹಾಗೆ ಕೇಳಿದೆ. ತರಬೇತುಗೊಂಡೆ. ಅದರೊಡನೆ ಸಂಬಂಧ ಬೆಳೆಯಿತು. ಆ ದಿನ ನಿದ್ರೆ ಮಾಡಿರಲಿಲ್ಲ. ಯಾಕಾದರೂ ಕತ್ತಲಾಯಿತು ಎಂದು ಭಾವಿಸಿದೆ. ಕೌತುಕ, ಆಸಕ್ತಿ, ಮುಗ್ಧತನಗಳಿಗೆ ವಯಸ್ಸಿನ ಮಿತಿಯಿಲ್ಲ ಎಂದೆನಿಸಿತು.






Azim Premji Foundation

## ನಾನು ಮೋಟಾರ್ ಬೈಕ್ ಕಲಿತ ಕ್ಷಣಗಳು,,,

ಯಾಕೋ ಏನೋ ಅದನ್ನು ನನ್ನ ಅಣ್ಣ ಯಾರಿಂದ ಪಡೆದಿದ್ದನೋ ಆತ ಮನೆಗೆ ಬಂದ. ತನಗೆ ಬೇಕೆಂದು ಕೇಳಿದ. ಇಲ್ಲ ಹಣ ನೀಡಿ ಎಂದು ಒತ್ತಾಯಿಸಿದ. ಹಣ ಇರಲಿಲ್ಲ ನೀಡಲು. ಬೈಕ್‌ನ್ನು ಪಡೆದುಕೊಂದು ಹೋದ. ಆತ್ಮೀಯ ಗೆಳೆಯ ಕೈಜಾರಿದ್ದ.

ಹೀಗೆ ಉಪನ್ಯಾಸಕ ವೃತ್ತಿ ಮಾಡುತ್ತಿರಲು, ಬಾಳೆಹೊನ್ನೂರಿನ ಕಾಲೇಜಿನ ಅಟೆಂಡರ್ ಶ್ಯಾಮಣ್ಣನ ಮನೆಯಲ್ಲಿ ಉಳಿದುಕೊಳ್ಳಬೇಕಾಯಿತು. ಉಳಿದಿದ್ದ ಮನೆಯಲ್ಲಿ ಸ್ನೇಹಪರತೆಯಿಂದಲೋ ಗೊತ್ತಿಲ್ಲ, ರಜಾದಿನಗಳಲ್ಲಿ ಸುತ್ತಮುತ್ತಲಿನ ಪ್ರದೇಶಗಳಿಗೆ ಹೋಗುತ್ತಿದ್ದೆವು. ಶ್ಯಾಮಣ್ಣ ಸಣ್ಣದಾದ ಒಂದು ಬೈಕನ್ನು ಹೊಂದಿದ್ದರು. ಬಾಳೆಹೊನ್ನೂರಿನಿಂದ ಮೇಲ್ಪಾಲ್ ತನಕ ಅವರೊಡನೆ ಹೋದೆ. ಮೇಲ್ಪಾಲ್ ಇಳಿಯುವಾಗ ಬಲಗಾಲಿನ ಚಪ್ಪಲಿನ ಅಡಿಭಾಗ ಸುಟ್ಟುಹೋಗಿತ್ತು. ಸೈಲೆನ್ಸರ್ ಮೇಲೆ ಕಾಲಿಡಬಾರದು ಎಂದು ಅಲ್ಲಿಂದ ತಿಳಿಯಿತು. ಹಿಂದಿರುಗಿ ಬರುವಾಗ ರೈಡ್ ಮಾಡಲು ಶ್ಯಾಮಣ್ಣ ಒತ್ತಾಯಿಸಿದರು. ಹಾಗೇ ಮಾಡಿದೆ. ಅಲ್ಲಲ್ಲಿ ನಿಲ್ಲಿಸಿ, ಓಡಿಸಿ, ಬಾಳೆಹೊನ್ನೂರಿಗೆ ಬಂದೆ. ಡಬಲ್ ರೈಡ್‌ನ ಅನುಭವ ಹೊಸತಾಗಿತ್ತು. ಅದನ್ನು ಕಲಿತೆ. ಅನುಭವಿಸಿದೆ. ಮರುದಿನ ಕಾಲೇಜಿನಲ್ಲಿ, ಸರ್‌ಗೆ ಬೈಕ್ ಸರಿಯಾಗಿ ಓಡಿಸಲು ಬರುವುದಿಲ್ಲ ಎಂದು ಗುಸು ಗುಸು ಶ್ಯಾಮಣ್ಣನ ಮೂಲಕ ಹರಡಿತ್ತು. ಮಾನಸಿಕವಾಗಿ ಅಂದು ನಿರ್ಧರಿಸಿದೆ.. ಕಲಿಯಲೇಬೇಕೆಂದು.

ಬಾಳೆಹೊನ್ನೂರಿನಿಂದ ಮಣಿಪಾಲಕ್ಕೆ ಬಂದು ನೆಲೆನಿಂತ ಸಮಯ. ಸಂಶೊಧನಾ ಕೆಲಸದ ನಿಮಿತ್ತ ಅಂದು ಸಂಪಾಜೆ ಬಳಿಯ ಕಲ್ಲುಗುಂಡಿಯ ನನ್ನ ಮಾವನ ಮನೆಗೆ ಹೋಗಿದ್ದೆ. ಮಾವನ ಮಗನ ಬೈಕ್ ನನ್ನ ಕಣ್ಣಿಗೆ ಬಿತ್ತು. ಕೇಳಿದೆ. ಕೆಲವು ಪ್ರದೇಶಗಳಿಗೆ ಭೇಟಿ ನೀಡಬೇಕಾಗಿದೆ. ಸ್ಥಳೀಯ ಜ್ಞಾನಪದ್ಧತಿಗಳ ಬಗ್ಗೆ ಮಾಹಿತಿ ಕಲೆಹಾಕಬೇಕು. ಬೈಕ್‌ನೊಡನೆ ನೀವೂ ಬರುತ್ತೀರಾ ಎಂದು. ಒಪ್ಪಿದರು. ಓಡಿಸಲು ಹೇಳಿದರು. ಬ್ರೇಕ್ ಚೆನ್ನಾಗಿಲ್ಲ ಎಂಬ ನೆಪವೊಡ್ಡಿ ಬೇಡವೆಂದೆ. ಏಕೆಂದರೆ ಸುಳ್ಯ–ಮಡಿಕೇರಿಯ ಹೆದ್ದಾರಿಯಲ್ಲಿ ಓಡಿಸುವುದನ್ನು ನೆನಪಿಸಿಕೊಂಡು ಸಣ್ಣದಾಗಿ ಬೆವರಿದ್ದೆ. ರಾಕ್ಷಸ ವೇಗದಲ್ಲಿ ಸಂಪಾಜೆ ಘಾಟಿಯಿಂದ ಇಳಿದು ಬರುವ ಕೆಂಪು ಮೂತಿಯ ಬಸ್ಸುಗಳ ಅಡಿಗೆ ಸಿಲುಕಿ ಸತ್ತೇ ಹೋಗುತ್ತೇನೆ ಎನ್ನುವ ಆತಂಕ ನನ್ನದು. ಆದರೆ ಸಂಪಾಜೆಯಿಂದ ಕಲ್ಲುಗುಂಡಿಗೆ ಹಿಂದಿರುಗಿ ಬರುವಾಗ ಇಳಿಜಾರಾದ ಪ್ರದೇಶವಾದ್ದರಿಂದ ಓಡಿಸಿದೆ. ಅರ್ಧ ದಾರಿ ಕ್ರಮಿಸುವಾಗ ಬ್ರೇಕ್ ಕೈಕೊಟ್ಟಿತ್ತು. ಹೇಗೋ ಈರ್ವರೂ ಟಾರ್ ರಸ್ತೆಗೆ ಕಾಲು ತಾಗಿಸಿ ನಿಯಂತ್ರಿಸಿದ್ದೆವು. ಪಕ್ಕದಲ್ಲಿ ಬಸ್ಸುಗಳು ಪಾಸಾದಾಗ ಬೈಕ್ ಅಲ್ಲಾಡುತ್ತದೆ ಎನ್ನುವ ಅನುಭವ ಆಯಿತು. ಹೆಚ್ಚು ಸಿಸಿ ಹೊಂದಿದ ಬೈಕ್‌ಗಳು ಹಾಗಾಗುವುದಿಲ್ಲ ಎಂದೂ ನಂತರ ತಿಳಿಯಿತು.






## ನಾನು ಮೋಟಾರ್ ಬೈಕ್ ಕಲಿತ ಕ್ಷಣಗಳು, (ಮುಂದುವರಿದಿದೆ)

ಈಗ ಸ್ವಂತ ಬೈಕ್‌ನ್ನು ಹೊಂದಿದರೆ ಮಾತ್ರವೇ ಸಂಪೂರ್ಣ ಕಲಿಯಲು ಸಾಧ್ಯ ಎನ್ನುವುದು ದಿಟವಾಗುತ್ತಾ ಹೋಯಿತು. ಆದರೆ ಬೈಕ್ ಸರಿಯಾಗಿ ಓಡಿಸಲು ಬರದೇ ಅದನ್ನು ಹೇಗೆ ಖರೀದಿಸುವುದು ಎನ್ನುವುದು ನನ್ನ ಪ್ರಶ್ನೆ. ಸೆಕೆಂಡ್ ಹ್ಯಾಂಡ್ ಅಥವಾ ಹೊಸದನ್ನು ಖರೀದಿಸುವುದೋ ಎನ್ನುವ ಆತಂಕ ನನ್ನದು. ಅಂತೂ ಉಡುಪಿಯ ಒಂದು ತರಬೇತಿ ಶಾಲೆಗೆ ಸೇರಿದೆ. ಒಟ್ಟು 14 ದಿನಗಳ ತರಬೇತಿ ನೀಡಿದರು. ಬೈಕ್ ಓಡಿಸುವಾಗ ಗಮನಿಸಲೇಬೇಕಾದ ರಸ್ತೆ ನಿಯಮಗಳನ್ನು ತಿಳಿಸಿದರು. ಆದಿ ಉಡುಪಿಯ ಹೆಲಿಪ್ಯಾಡ್ ನನ್ನ ಅಭ್ಯಾಸ ಸ್ಥಳವಾಗಿತ್ತು. 2–3 ದಿನ ಕಳೆದ ನಂತರ ಯಾಕೋ ಆತ್ಮವಿಶ್ವಾಸ ಹುಟ್ಟಿ, ಜೋರಾಗಿ ಓಡಿಸಿದೆ. ಓಡಿಸುವ ಭರದಲ್ಲಿ ಮುಂದುಗಡೆ ಇದ್ದ ಮರಳ ರಾಶಿಯನ್ನು ಗಮನಿಸಿರಲಿಲ್ಲ. ಅಲ್ಲಿ ಬಿದ್ದೆ. ಮರಳ ರಾಶಿಯ ಮೇಲೆ ನಿಧಾನವಾಗಿ ಓಡಿಸಬೇಕೆಂಬುದನ್ನು ಕಲಿತೆ. ತರಬೇತಿ ಶಾಲೆಯಲ್ಲಿ ಎಲ್ಲರೂ ನಾಲ್ಕು ಚಕ್ರದ ವಾಹನ ತರಬೇತಿಗಾಗಿ ಬಂದಿದ್ದರೆ, ನಾನು ಎರಡು ಚಕ್ರದ ಬೈಕ್ ಕಲಿಯಲು ಬಂದಿದ್ದೆ. ನನ್ನನ್ನು ನೋಡಿ ಒಳಗೊಳಗೇ ಮಾತಾಡುತ್ತಿದ್ದುದನ್ನು ಗಮನಿಸುತ್ತಿದ್ದೆ. ಮನಸ್ಸನ್ನು ಗಟ್ಟಿಗೊಳಿಸಿಕೊಂಡಿದ್ದೆ. ಎಲ್ಲರೂ ಸ್ನೇಹಿತರ ಸಹವಾಸದಿಂದ ಬೈಕ್‌ನ್ನು ಕಲಿಯುತ್ತಿದ್ದರು. ಆದರೆ ನನಗೆ ಹಾಗಾಗಲಿಲ್ಲ.

ಎರಡು ಚಕ್ರದ ಬೈಕನ್ನು ಓಡಿಸುವ ಪರವಾನಿಗೆ ಉಡುಪಿ ಆರ್.ಟಿ.ಒ. ದಿಂದ ದೊರಕಿದ ದಿನ ಸುಮಾರು ಹನ್ನೆರಡು ಸಾವಿರ ನೀಡಿ ಸಣ್ಣ ಬೈಕೊಂದನ್ನು ಪಡೆದುಕೊಂಡು ಬಂದೆ. ಬೆಳಗಾಗಲು ತವಕ. ಸ್ನಾನ ಮಾಡಿಸಿದೆ. ಗಣಪತಿಯ ಚಿತ್ರ ಅಂಟಿಸಿದೆ. ನಾನು ಬೈಕ್ ಕಲಿತೆ ಎನ್ನುವ ಸ್ವ-ಅಭಿಮಾನ ಬೆಳೆಯಿತು. ಬೈಕನ್ನು ಪ್ರೀತಿಸಲು ಕಲಿತೆ. ನಾಲ್ಕೈದು ವರ್ಷ ಕಳೆದ ಮೇಲೆ ಹೊಸ ಬೈಕೊಂದನ್ನು ಖರೀದಿಸಿದೆ. ಸಿಕ್ಕಿದ ಸಂದರ್ಭಗಳಲೆಲ್ಲಾ ಉಡುಪಿ ಜಿಲ್ಲೆಯನ್ನು ಸುತ್ತಿದೆ. ದಿನಕ್ಕೆ 100ರಿಂದ 150 ಕಿ.ಮಿ.ಗಳು ಓಡಿಸಿದ್ದ ನೆನಪು. ಅನುಭವಿಸಿದೆ.

ಹೊಟ್ಟೆಪಾಡಿಗಾಗಿ ಕೆಲಸ ಹುಡುಕಿಕೊಂಡು ಬೆಂಗಳೂರಿಗೆ ಬಂದೆ. ಮನೆಯಿಂದ ಕೆಲಸಕ್ಕೆ ಮತ್ತು ಕ್ಷೇತ್ರ ಕಾರ್ಯಕ್ಕೆ ಬೈಕ್ ಅನಿವಾರ್ಯವಾಯಿತು. ಸ್ನೇಹಿತನ ಬೈಕನ್ನು ಖರೀದಿಸಿದೆ. ಬೆಂಗಳೂರಿನ ಜನನಿಬಿಡ ಹಾಗೂ ವಾಹನನಿಬಿಡ ಪ್ರದೇಶಗಳಲ್ಲಿ ಬೈಕ್ ಓಡಿಸುವುದು ಸುಲಭದ ಮಾತಾಗಿರಲಿಲ್ಲ. ಜೀವ ಕೈಯಲ್ಲಿ ಹಿಡಿದುಕೊಂಡು ಕಳೆದ 4–5 ವರ್ಷಗಳಿಂದ ಓಡಿಸುತ್ತಿದ್ದೇನೆ. ದಿನಕ್ಕೊಂದು ಅನುಭವವಾಗುತ್ತಿದೆ. ಬೈಕ್ ಓಡಿಸುವ ಥ್ರಿಲ್ ಕಡಿಮೆಯಾಗಲಿಲ್ಲ. ಆಪತ್ಬಾಂಧವನಾಗಿದ್ದಾನೆ ಈ ಬೈಕ್. ಸಮಯದ ಉಳಿತಾಯವಾಗುತ್ತಿದೆ. ಆದರೆ ಶರೀರಕ್ಕೆ ಆಯಾಸ ಹೆಚ್ಚಾಗುತ್ತಿದೆ. ಬಾಲ್ಯತನದ ಬೈಕ್ ಓಡಿಸುವ ಮತ್ತು ಹೊಂದುವ ಆಸೆ ನೆರವೇರಿದೆ. ಮುನ್ನಡೆಯುತ್ತಿದ್ದೇನೆ. ಮುಂದಿನ ಅನುಭವಗಳಿಗಾಗಿ.

**ಡಾ. ಶೌರೀಶ್ ಕುದ್ಕುಳಿ**

*ಬೆಂಗಳೂರು.*






Azim Premji Foundation

# ಆರಂಭಿಕ ಓದು ಬರೆಹ:

## ಹನುಮಂತರಾಜು, ಬೆಂಗಳೂರು

ಮಗು ಗರ್ಭಾವಸ್ಥೆಯಲ್ಲಿರುವಾಗಲೇ ಹೊರಗಿನ ನುಡಿಗಳನ್ನು ಕೇಳಿಸಿಕೊಳ್ಳುತ್ತಿರುತ್ತದೆ. ಹೊರಗಡೆ ನಡೆಯುವ ಚಿತ್ರ ವಿಚಿತ್ರ ಶಬ್ದಗಳು, ವ್ಯಕ್ತಿಗಳ ಮಾತುಗಳನ್ನು ಕೇಳಿಸಿಕೊಳ್ಳುವ ಹಾಗೂ ವಾತಾವರಣದಲ್ಲಾಗುವ ಬದಲಾವಣೆಗಳು, ಸ್ಪರ್ಶ, ಒತ್ತಡ ಮುಂತಾದವುಗಳಿಗೆ ಸ್ಪಂದಿಸುವ ಪ್ರಕ್ರಿಯೆಗಳು ಪ್ರಾರಂಭವಾಗುತ್ತವೆ. ಈ ಪ್ರಕ್ರಿಯೆಗಳು ಬಹಳ ಸೂಕ್ಷ್ಮವಾಗಿ ತಾಯಿಗೆ ಒಂದಿಲ್ಲೊಂದು ರೀತಿಯಲ್ಲಿ ಅರಿವಾಗುತ್ತಿರುತ್ತವೆ. ಹೊಟ್ಟೆಯ ಸುತ್ತ ಕೈಯಾಡಿಸಿದರೆ ಗುಳುಂ ಎಂಬ ಶಬ್ದ ಕೇಳುವುದರೊಂದಿಗೆ ಹಾಗೂ ಕೈಕಾಲುಗಳಾಡಿಸಲು ತೊಡಗುವುದು ಅರಿವಿಗೆ ಬರುತ್ತದೆ. ಅಂದರೆ ಕ್ರಿಯೆಗೆ ಸ್ಪಂದಿಸುವ ಪ್ರಕ್ರಿಯೆಗಳು ಗರ್ಭದಿಂದಲೇ ಶುರುವಾಗುತ್ತವೆ.  ಮಗುವು ತಾಯಿಯ ಗರ್ಭದಿಂದ ಹೊರಬಂದ ಬಳಿಕ ಹೆಚ್ಚು ಹೆಚ್ಚು ಆಲಿಸುತ್ತದೆ. ತನ್ನ ಅಕ್ಷಿಪಟಲಕ್ಕೆ ಸಿಕ್ಕ ಎಲ್ಲಾ ವಸ್ತುಗಳು ಮತ್ತು ವ್ಯಕ್ತಿಗಳ ಚಿತ್ರಣಗಳನ್ನು ರೆಕಾರ್ಡ್ ಮಾಡಿಕೊಳ್ಳುತ್ತಿರುತ್ತದೆ. ಆಲಿಸುವಾಗ ಕಿವಿಯ ತಮಟೆಯ ಮೇಲೆ ಬಿದ್ದ ಶಬ್ದಗಳನ್ನು ಕರಗತಮಾಡಿಕೊಳ್ಳುತ್ತಾ ತೊದಲು ನುಡಿಗಳ ಮೂಲಕ ಪ್ರತಿಕ್ರಿಯಿಸುತ್ತದೆ. ಆಲಿಸುವ ಮತ್ತು ಮಾತನಾಡುವ ಕೌಶಲಗಳ ತರುವಾಯ ನಮಗೆ ಸಿಗುವಂತದ್ದು ಓದುವ ಮತ್ತು ಬರೆವಣಿಗೆಯ ಕೌಶಲಗಳು.

ಮನೆಯಲ್ಲಿ ಮೊದಲ ತಲೆಮಾರಿನ ಓದುಗರಿದ್ದಾಗ ಅವರ ಎಲ್ಲಾ ಚಲನವಲನಗಳು ಮಗುವಿನ ಮೇಲೆ ಪ್ರಭಾವ ಬೀರುತ್ತದೆ. ನನ್ನ ಅಕ್ಕಳಿಗೆ ಇಬ್ಬರು ಮಕ್ಕಳು. ರಂಜಿತನಿಗೆ ಎರಡು ವರ್ಷ ಶ್ರೀಧರ್‌ನಿಗೆ ಆರು ವರ್ಷ. ಶ್ರೀಧರ್ ಒಂದನೇ ತರಗತಿಯಲ್ಲಿ ಕಲಿಯುತಿದ್ದಾನೆ. ಅವನಿಗೆ ಶಾಲೆಯಲ್ಲಿ ಕೆಲವು ಪುಸ್ತಕಗಳನ್ನು ಕೊಟ್ಟಿದ್ದಾರೆ. ಮನೆಯಲ್ಲಿ ಕುಳಿತು ಓದುವಾಗ ಅವನ ತಮ್ಮ ಎದುರು ಇಲ್ಲವೇ ಪಕ್ಕದಲ್ಲಿ ಕುಳಿತುಕೊಂಡು ಅಣ್ಣ ಮಾಡುವ ಎಲ್ಲಾ ಪ್ರಕ್ರಿಯೆಗಳನ್ನು ಮೊದಲಿಗೆ ಗಮನಿಸುತ್ತಾನೆ. ಪುಸ್ತಕವನ್ನು ಹಿಡಿದು ಓದಲು ಶುರುಮಾಡಿದಾಗ ಇವನು ಒಂದು ಪುಸ್ತಕವನ್ನು ತೆಗೆದುಕೊಂಡು ಮೊದಲಿಗೆ ಅದರಲ್ಲಿರುವ ಎಲ್ಲಾ ಹಾಳೆಗಳನ್ನು ತಿರುಗಿಸುತ್ತಾನೆ. ನಂತರದಲ್ಲಿ ಒಂದೊಂದೆ ಹಾಳೆಯನ್ನು ತಿರುಗಿಸಿ ಅದರಲ್ಲಿರುವ ಚಿತ್ರಗಳನ್ನು ಗಮನಿಸುತ್ತಾನೆ.

ಅಣ್ಣ ಓದುವಾಗ ಅವನ ತುಟಿಗಳನ್ನು ತದೇಕಚಿತ್ತದಿಂದ ನೋಡುತ್ತಾನೆ. ನಂತರದಲ್ಲಿ ಚಿತ್ರಗಳ ಮೇಲೆ ಬೆರಳಾಡಿಸುತ್ತಾ ಅದರ ಅಡಿಯಲ್ಲಿರುವ ಲಿಪಿಯನ್ನು ಓದಲು ಪ್ರಯತ್ನಿಸುತ್ತಾನೆ. ಅವನ ತೊದಲು ನುಡಿಗಳು ಓದುವ ಪ್ರಕ್ರಿಯೆಗೆ ಅಣಿಗೊಳ್ಳುತ್ತಿರುವುದನ್ನು ಸೂಚಿಸುತ್ತದೆ. ತನ್ನ ಅಣ್ಣ ಸೀಸದ ಕಡ್ಡಿಯನ್ನು ತೆಗೆದುಕೊಂಡು ಮನೆಗೆಲಸವನ್ನು ಬರೆಯಲು ತೊಡಗಿದಾಗ ಅವನ ಕೈಯಿಂದ ಅದನ್ನು ಕಸಿದುಕೊಂಡು ತಾನೂ ಕೂಡ ಬರೆವಣಿಗೆಯ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುತ್ತಾನೆ. ತನಗೆ ಅನ್ನಿಸಿದನ್ನು ಉಚ್ಚರಿಸುತ್ತಾ, ಗುನುಗುತ್ತಾ, ಬರೆಯುತ್ತಾನೆ. ತನಗೆ ತೋಚಿದ್ದು ಗೀಚುವ ಪ್ರಕ್ರಿಯೆಯಿಂದ ಅವನ ಬರೆವಣಿಗೆ ಶುರುವಾಗುತ್ತದೆ. ರಂಜಿತ್ ಒಂದು ಸೊನ್ನೆ ಸುತ್ತಿದರೂ ಅಥವಾ ಒಂದು ಗೆರೆ ಎಳೆದರೂ ಅವನ ದೃಷ್ಟಿಯಲ್ಲಿ ಒಂದು ಲಿಪಿಯನ್ನೋ ಅಥವಾ ಒಂದು ಚಿತ್ರವನ್ನೋ ಸಂಕೇತಿಸುತ್ತಿರುತ್ತದೆ.


ಪಿಯೂಷ್ ಪ್ರಜಾವಾಣಿ ಪತ್ರಿಕೆಯನ್ನು ಹಿಡಿದುಕೊಂಡು ನನ್ನ ಬಳಿ ಓಡಿ ಬಂದನು. ಅದರಲ್ಲಿರುವ ಒಂದು ಚಿತ್ರವನ್ನು ತೋರಿಸಿ ಇದು ನನಗೆ ಬೇಕು ಎಂದು ಹಠಮಾಡಿದನು. ಏನಿರಬೇಕೆಂದು ಗಮನಿಸಿದಾಗ ಅದು ಅಮುಲ್ ಐಸ್‌ಕ್ರೀಮ್ ಕಂಪನಿಯವರು ಕೊಟ್ಟಿರುವ ಜಾಹಿರಾತಿನಲ್ಲಿ ಬಗೆ ಬಗೆಯ ಐಸ್ ಕ್ರೀಮ್‌ಗಳಿಗೆ ಸಂಬಂಧಿಸಿದ್ದು ಪಿಯೂಷ್ ನನ್ನು ಸೆಳೆದಿದ್ದವು. ಇದರಿಂದ ತಿಳಿದುಬರುವುದೇನೆಂದರೆ ಮುದ್ರಿತ ವಸ್ತುಗಳ ಶ್ರೀಮಂತ ಪರಿಸರದಲ್ಲಿ ಬೆಳೆದ ಮಕ್ಕಳು ಹೆಚ್ಚು ಚಿತ್ರ ಮತ್ತು ಲಿಪಿಗಳನ್ನು ಸಂಯೋಜಿಸುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿರುತ್ತಾರೆ. ಮಕ್ಕಳು ಹೇಗೆ ಲಿಪಿ ಮತ್ತು ಚಿತ್ರಗಳನ್ನು ವೀಕ್ಷಿಸಿ ಕಲಿಕೆಯಲ್ಲಿ ತೊಡಗಿಕೊಂಡಿರುತ್ತಾರೆ ಎಂಬುದು ಇದರಿಂದ ತಿಳಿದುಬರುತ್ತದೆ. ಈ ರೀತಿಯ ಕಲಿಕೆ ಮಗುವಿನ ಜೀವನದಲ್ಲಿ ಸ್ವಾಭಾವಿಕವಾಗಿ ನಡೆಯುವ ಪ್ರಕ್ರಿಯೆಯಾಗಿದೆ.

## ಆರಂಭಿಕ ಓದು ಬರೆಹ,,,

ಅಮ್ಮ ಅಡುಗೆ ಮಾಡುವಾಗ ಅಮ್ಮನಿಗೆ ಬೇಕಾದ ಪರಿಕರಗಳನ್ನು ತೆಗೆದು ಕೊಡುತ್ತಾನೆ. ಅಡುಗೆ ಮನೆಯಲ್ಲಿ ಸಾಂಬಾರ್ ಪದಾರ್ಥಗಳನ್ನು ಒಂದೊಂದು ಡಬ್ಬಿಯಲ್ಲಿ ಹಾಕಿ ಅದರ ಮೇಲೆ ಡಬ್ಬಿಯ ಒಳಗಿರುವ ಪದಾರ್ಥದ ಹೆಸರು ಮತ್ತು ಚಿತ್ರವನ್ನು ಬರೆಯಲಾಗಿದೆ ಹಾಗೂ ಪದಾರ್ಥಗಳನ್ನು ಡಬ್ಬಗಳಿರುವ ಗಾತ್ರಗಳಿಗೆ ಅನುಗುಣವಾಗಿ ತುಂಬಲಾಗಿದೆ. ಉದಾ: ಸಾಸಿವೆಗೆ ಚಿಕ್ಕ ಡಬ್ಬ, ಉಪ್ಪಿಗೆ ದೊಡ್ಡ ಗಾತ್ರದ ಡಬ್ಬ. "ಸಾಂಬರಿಗೆ ಉಪ್ಪನ್ನು ತೆಗೆದುಕೊಡು ರಂಜಿತ್" ಎಂದು ಅವನ ತಾಯಿ ಕೇಳಿದಾಗ ಮೊದಲು ಅವನು ಅಡುಗೆ ಮನೆಯಲ್ಲಿರುವ ಎಲ್ಲಾ ಡಬ್ಬಗಳನ್ನು ಗಮನಿಸಿ ನಂತರದಲ್ಲಿ ಡಬ್ಬದ ಮೇಲಿರುವ ಚಿತ್ರಗಳನ್ನು ನೋಡಿ ಉಪ್ಪಿನ ಡಬ್ಬವನ್ನು ಗುರುತಿಸುತ್ತಾನೆ. ಮೊದಲಿಗೆ ಆಲಿಸಿ ನಂತರದಲ್ಲಿ ಚಿತ್ರಕ್ಕೆ ಲಿಪಿಯನ್ನು ಸಮೀಕರಿಸಿ ನೋಡಿ ಅದರೊಳಗಿನ ಪರಿಕರವನ್ನು ಗುರುತಿಸುವ ಪ್ರಕ್ರಿಯೆಯಲ್ಲಿ ರಂಜಿತ್ ಮಗ್ನನಾಗಿರುವುದು ಕಂಡುಬರುತ್ತದೆ.

ಮೌಖಿಕ ಭಾಷೆಯ ತಳಹದಿಯಲ್ಲಿ ಓದು ಮತ್ತು ಬರೆಹದ ಬೆಳವಣಿಗೆಯಾಗುತ್ತದೆ. ಇವೆರೆಡು ಒಂದಕ್ಕೊಂದು ಸಹ ಸಂಬಂಧವನ್ನು ಹೊದಿರುವಂತಹುಗಳು. ಒಂದನ್ನು ಬಿಟ್ಟು ಒಂದು ಇರಲು ಸಾಧ್ಯವಿಲ್ಲ. ಮಕ್ಕಳು ಆಟವಾಡುವಾಗ ಉದಾ: ಕುಂ-ಟೇಬಿಲ್ಲೆ, ಗೋಲಿ, ಬುಗುರಿ, ಚಿನ್ನಿದಾಂಡು, ಇತ್ಯಾದಿ ಒಂದು ಸಣ್ಣ ಕಡ್ಡಿಯನ್ನು ತೆಗೆದುಕೊಂಡು ಗೀಚುತ್ತಾರೆ ಅಂದರೆ ಕುಂಟೇಬಿಲ್ಲೆ ಆಟವಾಡುವಾಗ ಚೌಕಾಕಾರದ ಮನೆಯನ್ನು, ಗೋಲಿ ಆಟವಾಡುವಾಗ ದುಂಡನೆಯ ವೃತ್ತವನ್ನು, ರಂಗೋಲಿ ಬಿಡಿಸುವಾಗ ಚುಕ್ಕೆಗಳನ್ನು ಹಾಕುತ್ತಾರೆ. ಈ ಹಂತದಿಂದಲೇ ಮಗುವಿನ ಬರೆವಣಿಗೆಯ ಪ್ರಕ್ರಿಯೆ ಪ್ರಾರಂಭವಾಗುತ್ತದೆ.

ಮಗುವಿನ ಬೆಳವಣಿಗೆಯ ಮೇಲೆ ಮನೆಯ ವಾತಾವರಣ ಸಾಮಾಜಿಕ ಮತ್ತು ಸಾಂಸ್ಕೃತಿಕ, ಅಂಶಗಳು ಹೆಚ್ಚು ಪ್ರಭಾವ ಬೀರುತ್ತವೆ. ಮನೆಯಲ್ಲಿ ಮೊದಲ ತಲೆಮಾರಿನ ಓದುಗರಿದ್ದಾಗ ಆ ಮಗುವಿಗೆ ಮುದ್ರಿತ ವಸ್ತುಗಳು ಹೆಚ್ಚು ಸಿಗುತ್ತವೆ ಹಾಗೂ ಓದು ಮತ್ತು ಬರೆಹದ ಅನುಭವಕ್ಕೊಳಪಡುತ್ತಾರೆ.




ಹನುಮಂತರಾಜು, ಬೆಂಗಳೂರು

# “?”

**ಮಾರುತಿ.ಡಿ** ಮಂಡ್ಯ

‘ಭಾರತದ ಸಂವಿಧಾನ’ವನ್ನು ಅರ್ಥೈಸಿಕೊಳ್ಳಬೇಕಾದರೆ ಭಾರತದ ಇಂದಿನ ಪರಿಸ್ಥಿತಿ, ಜನಜೀವನದ ಜೊತೆಗೆ ಹಿಂದಿನ ಸಾಂಸ್ಕೃತಿಕ, ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಸಂಕಥನದೊಂದಿಗೆ ಅನುಸಂಧಾನ ನಡೆಸಿದಾಗ ಮಾತ್ರ ನಮ್ಮ ಸಂವಿಧಾನದ ತಿಳಿವಳಿಕೆಯ ಸಾರವನ್ನು ಅರಿಯಲು ಸಾಧ್ಯವಾಗುತ್ತದೆ. ಇದರಲ್ಲಿರುವ ಪ್ರಸ್ತಾವನೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅಂತಹ ಸಮಾಜವನ್ನು ಕಟ್ಟುವಲ್ಲಿ ನಮಗೆ ಇನ್ನೂ ಸ್ವಲ್ಪ ಕಾಲ ಬೇಕಾಗಬಹುದು.

ಆದರೆ ಇಂದು ಅದರಲ್ಲಿನ ಸಾಂವಿಧಾನಿಕ ಮೌಲ್ಯಗಳ ಅಪವ್ಯಾಖ್ಯಾನ ನಡೆಯುತ್ತಿರುವುದು ಖೇದಕರ ಸಂಗತಿ. ಈ ಎಲ್ಲ ಮೌಲ್ಯಗಳನ್ನು ‘ಸುಧಾರಣೆ’ ಮತ್ತು ‘ಅಭಿವೃದ್ಧಿ’ ಎಂಬ ಎರಡು ಪದಗಳು ಆವರಿಸಿಬಿಟ್ಟಿವೆ. ಅವುಗಳನ್ನು ನಿರ್ವಚಿಸುವ ಕ್ರಮವೂ ಕೂಡ ಕೇವಲ ಆರ್ಥಿಕ ಮತ್ತು ಭೌತಿಕ ಸಂಗತಿಗಳಿಗೆ ಸೀಮಿತವಾಗಿ ಅದು ತಲಾದಾಯ, ಅಂತರಾಷ್ಟ್ರೀಯ ಮಟ್ಟದಲ್ಲಿ ರೂಪಾಯಿ ಮೌಲ್ಯಗಳಿಗೆ ಸೀಮಿತವಾಗಿ ಅಪವ್ಯಾಖ್ಯಾನಗೊಳ್ಳುತ್ತಿರುವುದನ್ನು ನಾವು ಗಮನಿಸಬಹುದು. ನಿಜವಾಗಿಯೂ ‘ಸುಧಾರಣೆ’ ಮತ್ತು ‘ಅಭಿವೃದ್ಧಿ’ ಎನ್ನುವುದು ಬಹಳ ವಿಸ್ತಾರವಾಗಿ ನೋಡುವ ಅಗತ್ಯ ಇದೆ. ಆರ್ಥಿಕ ಆಯಾಮ ಮತ್ತು ಭೌತಿಕ ಆಯಾಮವನ್ನು ದಾಟಿ ಅದು ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಜಾತ್ಯತೀತತೆ, ದಲಿತರ, ಮಹಿಳೆಯರ, ಬಡವರ, ರೈತರ, ಕಾರ್ಮಿಕರ, ಮಕ್ಕಳ........ ಹೀಗೆ ಬಹು ಆಯಾಮದಲ್ಲಿ ‘ಸುಧಾರಣೆ’ ಮತ್ತು ‘ಅಭಿವೃದ್ಧಿ’ಯನ್ನು ನಿರ್ವಚಿಸುವ ಅಗತ್ಯವನ್ನು ಕಾಣುತ್ತೇವೆ.




ಜೊತೆಗೆ ‘ಭಾರತದ ಸಂವಿಧಾನ’ ಹೇಳುವ ‘ಬಹುತ್ವ’ ಮತ್ತು ‘ವೈವಿಧ್ಯತೆ’ಗಳು ಕೂಡ ಇಂದು ಅಪವ್ಯಾಖ್ಯಾನಕ್ಕೆ ಒಳಗಾಗಿ ‘ರಾಷ್ಟ್ರೀಯತೆ’ ಮತ್ತು ‘ದೇಶಪ್ರೇಮ’ ಎಂಬುದು ಧರ್ಮದ ಹಿನ್ನೆಲೆಯಲ್ಲಿ ನೋಡುವ ದೃಷ್ಟಿಕೋನಕ್ಕೆ ತಲುಪುತ್ತಿದೆ. ಧರ್ಮವೆನ್ನುವುದು ರಾಷ್ಟ್ರೀಯತೆಯ ಒಂದು ಭಾಗವೇ ವಿನಃ ಧರ್ಮವೇ ರಾಷ್ಟ್ರೀಯತೆಯಲ್ಲ. ಇನ್ನೊಂದು – ‘ಸಂಸ್ಕೃತಿ’ ಎಂಬ ಪದವು ಕೂಡ ಧರ್ಮದ ಚೌಕಟ್ಟಿನ ಒಳಗೆ ನೋಡದೆ ಬಹಳ ವಿಸ್ತಾರವಾಗಿ ನೋಡುವ ಅಗತ್ಯವಿದೆ. ‘ಭಾರತೀಯ ಸಂಸ್ಕೃತಿ’ ಎಂಬ ಪದವೇ ಎಲ್ಲೋ ಒಂದು ಕಡೆ ಭಾರತಕ್ಕೆ ‘ಒಂದು ಸಂಸ್ಕೃತಿ’ ಎಂಬುದನ್ನು ಹೇಳುವಂತಿದೆ. ಭಾರತವು ಅನೇಕ ಸಂಸ್ಕೃತಿ, ಧರ್ಮ ಜಾತಿಗಳ ವೈವಿಧ್ಯತೆಯಿಂದ ಕೂಡಿರುವುದನ್ನು ಕಾಣಬಹುದು. ‘ಒಂದು ದೇಶ’, ‘ಒಂದು ಧರ್ಮ’, ‘ಒಂದು ಸಂಸ್ಕೃತಿ’, ‘ಒಂದು ಶಿಕ್ಷಣ’, ‘ಒಂದು ಭಾಷೆ’, ‘ಒಬ್ಬ ನಾಯಕ’ ಎಂಬ ಪರಿಕಲ್ಪನೆಗಳು ದೇಶಕ್ಕೆ, ಪ್ರಜಾಪ್ರಭುತ್ವಕ್ಕೆ ಅಲ್ಲದೇ ವಿಶ್ವಕ್ಕೆ ಅಪಾಯಕಾರಿಯಾದವುಗಳು. ಪರಿಸರದ ವೈವಿಧ್ಯತೆಯಂತೆ ಜನರ ಜೀವನದ ವೈವಿಧ್ಯತೆಯು ಮನುಕುಲದ ಬದುಕಿನ ರಹದಾರಿಯಾಗಿದೆ.

ಒಟ್ಟಾರೆ ಸಾಂವಿಧಾನಿಕ ಮೌಲ್ಯಗಳ ಅಪವ್ಯಾಖ್ಯಾನ ಮತ್ತು ನಿಜವ್ಯಾಖ್ಯಾನದ ಸಂಘರ್ಷಗಳ ನಡುವೆ ವಿಶ್ವಮಾನವತ್ವವನ್ನು ಹುಡುಕುವ ಅನಿವಾರ್ಯತೆ ಇದೆ. ಇಷ್ಟೆಲ್ಲ ಆಲೋಚನೆಗಳು ನನ್ನನ್ನು ಕಾಡಿದರೂ ಸಹ ಕೊನೆಗೊಂದು ‘?’ ಹಾಗೆಯೇ ಇದೆ. ನಮ್ಮ ಸಂವಿಧಾನದ ಪ್ರಸ್ತಾವನೆಯಲ್ಲಿ ಹೇಳಿರುವ ಭಾರತವನ್ನು ರೂಪಿಸುವವರು ಯಾರು?

Azim Premji Foundation

# "ಗಾಂಧಿ ಮತ್ತು ಅಹಿಂಸೆ"

**"ಅಸಮಾನತೆಯಿಂದ ಹಿಂಸೆ ಸಮಾನತೆಯಿಂದ ಅಹಿಂಸೆ ಹುಟ್ಟಿಕೊಳ್ಳುತ್ತದೆ."** ಈ ವಾಕ್ಯ ಗಾಂಧೀಜಿಯವರಿಗಿದ್ದ ವರ್ಗರಹಿತ ಮತ್ತು ಜಾತಿರಹಿತ ಭಾರತ ನಿರ್ಮಾಣದ ಬಗ್ಗೆ ಅವರಿಗಿದ್ದ [೧೯೪೬ ]ಅವರ ಕನಸು, ಛಲವನ್ನು ಪ್ರಚುರಪಡಿಸುತ್ತದೆ. ಜೀವವನ್ನು ತಿಂದು ಜೀವ ಬದುಕಿಸಬೇಕಿರುವ ನಿಸರ್ಗನೀತಿಯಲ್ಲಿ ಅಹಿಂಸೆ ಅಣುವಿನಷ್ಟು ಲೋಪವಿಲ್ಲದಂತೆ ಅನುಷ್ಠಾನಗೊಳ್ಳುವುದು ಹೇಗೆ ಸಾಧ್ಯ ? ಎಂಬ ಪ್ರಶ್ನೆ ಕೆಲವೊಮ್ಮೆ ನನಗೆ ಮೂಡುತ್ತಿತ್ತು. ನಿಮಗೂ ಮೂಡಿರಬಹುದು.

ಗಾಂಧೀಜಿಯನ್ನು ರಾಷ್ಟ್ರಪಿತ ಎಂದು ಕರೆಯುತ್ತೇವೆ. ಅವರು ಹುಟ್ಟಿದ ದಿನವೇ ಶಾಸ್ತ್ರೀಜಿ ಕೂಡಾ ಹುಟ್ಟಿದ್ದಾರೆ. ಅವರು ಕೂಡ ಸ್ಮರಣೆಗೆ ಅರ್ಹರಾದ ವ್ಯಕ್ತಿತ್ವದವರು, ನಾನೀಗ ಇದರಾಚೆ ಕೆಲವು ಅಂಶಗಳನ್ನು ಹಂಚಿಕೊಳ್ಳಲು ಇಷ್ಟಪಡುತ್ತೇನೆ. ಗಾಂಧೀಜಿ ಹುಟ್ಟಿದ ದಿನದಂದು ನಾವಿಂದು ಇನ್ನೊಂದು ಹೊಸ ದಿನಾಚರಣೆಯನ್ನು ಆಚರಿಸುತ್ತಿದ್ದೇವೆ. 'ಸ್ವಚ್ಛ ಭಾರತ್ ದಿವಸ್' ಎಂದು. ಎರಡರ ಪರಿಕಲ್ಪನೆ ಬೇರೇನೆ ಇರಬಹುದು. ಆದರೆ ನಾನೀಗ ಗಾಂಧೀಜಿಗೆ ಇದ್ದ ಬಹುತ್ವ ಭಾರತದ ನಿರ್ಮಾಣದ ಕನಸನ್ನು ಅವರ ಆಶಯದ ಬಗ್ಗೆ ಅವರು ಮಾಡಿದ ಕೆಲಸಗಳು ಆ ಕಾರ್ಯಕ್ಕೆ ಎಷ್ಟು ಪೂರಕವಾಗಿದ್ದವು ಎಂಬುದನ್ನು ಚರ್ಚಿಸಬಯಸುತ್ತೇನೆ. ಆದರೆ ಅದನ್ನು ಅರ್ಥಮಾಡಿಕೊಳ್ಳದೆ ಕೆಲವೊಮ್ಮೆ ಮನುಷ್ಯರು ಅತಿಯಾದ ಧರ್ಮಾಭಿಮಾನದಿಂದ ಅವರನ್ನು ಹೇಗೆ ತದ್ವಿರುದ್ಧವಾಗಿ ಅವರ ವಿಚಾರವನ್ನು ಅರ್ಥಮಾಡಿಕೊಂಡರು ಎಂದೆನಿಸುತ್ತದೆ.

ಈ ಸಮಯದಲ್ಲಿ ಗಾಂಧೀಜಿಯನ್ನು ಕೊಂದಾಗ ನಾಥುರಾಂ ನ್ಯಾಯಾಲಯದಲ್ಲಿ ಹೇಳಿಕೊಂಡ ಅಂಶಗಳು ನೆನಪಾಗುತ್ತದೆ."ನಾನು ಹುಟ್ಟಿನಿಂದ ಬ್ರಾಹ್ಮಣ ಹಿಂದೂ ಧರ್ಮ ಸಂಸ್ಕೃತಿ ಬಗೆಗೆ ಸಹಜಗೌರವ ಭಾವ ಹೊಂದಿದ್ದೆ. ಹಿಂದೂ ಸಮಾನತೆಯಲ್ಲಿ ಆಸಕ್ತಿಯುಳ್ಳ ನಾನು ಜಾತಿ ವಿರೋಧಿ ಭೋಜನ ಕೂಟಗಳಲ್ಲಿ ಭಾಗವಹಿಸಿದ್ದು ಈ ಭೋಜನಕೂಟಗಳಲ್ಲಿ ಭಂಗಿಯಿಂದ ಹಿಡಿದು ಬ್ರಾಹ್ಮಣರವರೆಗೆ ಭಾಗವಹಿಸುತ್ತಿದ್ದರು ಆನಂತರ ಗಾಂಧೀಜಿ ಮತ್ತು ಸಾವರ್ಕರ್ ಕೃತಿ ಓದಿ ಪ್ರಭಾವಿತನಾದೆ. ಗಾಂಧೀಜಿಯವರ ಸತ್ಯ ಮತ್ತು ಅಹಿಂಸೆಯ ಸಿದ್ಧಾಂತ ಹೊಸದೇನೂ ಅಲ್ಲ ಎಂದು ಭಾವಿಸಿದೆ. ಅಲ್ಲದೆ ಅಹಿಂಸಾ ತತ್ವವು ನಮ್ಮ ಕ್ಷಾತ್ರವನ್ನು ನಾಶ ಮಾಡುತ್ತದೆಂದು ತಿಳಿದೆ. ಶ್ರೀ ಕೃಷ್ಣ ಕಂಸನನ್ನು ಕೊಂದ; ಅರ್ಜುನನೂ ಭೀಷ್ಮರನ್ನೂ ಬಿಡದೆ ಎಲ್ಲಾ ಆಕ್ರಮಣಕಾರರ ವಿರುದ್ಧ ಹೋರಾಡಿದ. ಇದ್ಯಾವುದನ್ನು ಪರಿಗಣಿಸದೆ ಗಾಂಧೀಜಿಯವರು ಮಾನವ ಕ್ರಿಯಾ ಚೈತನ್ಯವನ್ನೆ ನಿರ್ಲಕ್ಷಿಸಿದರು. ಮುಸ್ಲಿಮರ ಪರವಾಗಿ ಗಾಂಧೀಜಿ ಕೈಗೊಂಡ ಕೊನೆಯ ಉಪವಾಸ ಸತ್ಯಾಗ್ರಹವು ಇನ್ನು ಅವರನ್ನು ಉಳಿಸಬಾರದು ಎಂಬ ನನ್ನ ಸಂಕಲ್ಪಕ್ಕೆ ಇಂಬುಕೊಟ್ಟಿತು."

Azim Premji Foundation

## "ಗಾಂಧಿ ಮತ್ತು ಅಹಿಂಸೆ"

ಇದು ಗೋಡ್ಸೆ ಹೇಳಿಕೆಯ ಸಂಕ್ಷಿಪ್ತ ಸಾರ: ಗಾಂಧೀಜಿಯವರನ್ನು ಕೊಲ್ಲಲು ಗೋಡ್ಸೆಗಿದ್ದ ಕಾರಣಗಳು ಈ ಹೇಳಿಕೆಯಲ್ಲಿ ಸ್ಪಷ್ಟವಾಗಿವೆ: ಮತಾಂಧತೆ ಮತ್ತು ಅಸಹನೆಗಳು ಹೇಗೆ ಹಿಂಸೆಯನ್ನು ಪ್ರಚೋದಿಸುತ್ತವೆ, ಮತ್ತು ಆಚರಣೆಗೆ ತರುತ್ತವೆ ಎಂಬುದಕ್ಕೆ ಗೋಡ್ಸೆ ಒಂದು ರೂಪಕ; ಹಿಂಸೆಯ ರೂಪಕ. ಹಿಂದೂಗಳೇ ಆಗಲಿ ಮುಸ್ಲಿಂರೇ ಆಗಲಿ ಹತ್ಯೆಯೇ ಅಂತಿಮ ಎಂದರೆ ಅವರು ಕೂಡಾ ಹಿಂಸೆಯ ರೂಪಕಗಳೇ ಆಗುತ್ತಾರೆ.

ಗಾಂಧೀಜಿಯವರು  ಬಹುತ್ವ ಭಾರತದ ನಿರ್ಮಾಣದ ಸಂಕಲ್ಪ ಮಾಡಿದ್ದರು. ಹಾಗಾಗಿ "ಅಂತರ್ ಜಾತಿ ವಿವಾಹ ಮತ್ತು ಭೋಜನದ ಬಗ್ಗೆ ನನ್ನ ವಿರೋಧವಿಲ್ಲ" [೧೯೩೬] ಎಂದು ಹೇಳುವುದರ ಜೊತೆಗೆ ಈ ಜಾತಿ ಉಪಜಾತಿಗಳು ಅಳಿಯಬೇಕು. ಸವರ್ಣೀಯರು ಮತ್ತು ಅತಿಶೂದ್ರರ ನಡುವಿನ ಮದುವೆಗಳಿಗೆ ಮಹತ್ವ ಕೊಡಬೇಕು. ವರ ಮತ್ತು ವಧು ಇಬ್ಬರಲ್ಲಿ ಒಬ್ಬರು ಹರಿಜನರಾಗಿದ್ದರೆ  ಮಾತ್ರ ಆಶ್ರಮದಲ್ಲಿ ಮದುವೆಗೆ ಅವಕಾಶ [೧೯೪೬]ಎಂದು ಘೋಷಿಸಿ ಅದರಂತೆ ನಡೆದುಕೊಂಡರು.

ಈ ಎಲ್ಲಾ ಮಾತುಗಳು ಅವರು ಮಾಡುತ್ತಿದ್ದ ಕಾರ್ಯ ಯೋಜನೆಗಳು ನಡೆದ ರೀತಿ ಬಹುತ್ವ ಭಾರತದ ನಿರ್ಮಾಣಕ್ಕೆ ಎಂದು ಬೇರೆ ಹೇಳಬೇಕಾಗಿಲ್ಲ . ಅವರು ತಮ್ಮ ಹೋರಾಟದಲ್ಲಿ ಪ್ರಧಾನವಾಗಿ ಪರಿಗಣಿಸಿದ್ದು  ಮೂರು ಪ್ರತೀಕಗಳು: ಚರಕ, ಖಾದಿ, ಮತ್ತು ಉಪ್ಪು, ಸೂಕ್ಷ್ಮವಾಗಿ ಗಮನಿಸಿದಾಗ ನನಗೆ ಅನ್ನಿಸಿದ್ದು ಈ ಮೂರು ಯಾವ ಜಾತಿಗೂ ಯಾವ ಧರ್ಮಕ್ಕೂ ಸೇರಿದವಲ್ಲ. ಗುಡಿ ಕೈಗಾರಿಕೆಯ ಪ್ರತೀಕವಾಗಿ ಚರಕ, ಸ್ವದೇಶಿ ಪ್ರತೀಕವಾಗಿ ಖಾದಿ, ಸರ್ವರ ಬಳಕೆಯ ಪ್ರತೀಕವಾಗಿ ಉಪ್ಪು ಇವು ಜ್ಯಾತ್ಯತೀತ ಪ್ರತೀಕಗಳು. ಅವು ಹೋರಾಟದ ಪ್ರತೀಕಗಳು. ಜಾತಿ ಧರ್ಮಗಳನ್ನು ಮೀರಿದ್ದವು ಎಂಬುದನ್ನು ಅರ್ಥ ಮಾಡಿಕೊಳ್ಳದಿದ್ದರೆ ಅಹಿಂಸೆಯೂ ಅರ್ಥವಾಗುವುದಿಲ್ಲ; ಅಂಬೇಡ್ಕರ್ ನೇತೃತ್ವದ  ನಮ್ಮ ಸಂವಿಧಾನವೂ ಅರ್ಥವಾಗುವುದಿಲ್ಲ. ಇದರರ್ಥ  ಇಷ್ಟೇ. ನಾವು ಎಲ್ಲವನ್ನು ಮೀರಿದಾಗ ಮಾತ್ರ ಮನುಷ್ಯನಿಂದ ಮಾನವರಾಗ್ತೇವೆ. ಸಾಮಾಜಿಕ ಸಮಾನತೆಗೆ ನೆಲೆ ಒದಗಿಸಿದವರಂತೆ ನಾವು ಕೂಡಾ ಸದಾ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯದ  ಪರಿಕಲ್ಪನೆಯ ಬಹುತ್ವ ಭಾರತ ಕಟ್ಟುತ್ತೇವೆ. ಈ ಬರೆಹಕ್ಕೆ ಗಾಂಧೀಜಿಯವರ ವಿಚಾರಗಳು ಸ್ಫೂರ್ತಿಯಾದರೆ, ನಮಗೆಲ್ಲಾ ಗಾಂಧೀಜಿ ಜೀವ ಶಕ್ತಿಯಾಗಿರಲಿ,ಬಹುತ್ವದಲ್ಲಿ ಭಾರತ ಬೆಳೆಯಲಿ ಎಂಬ ಆಶಯ.

**ಮಂಜುಳ ಜಿ.ಎಚ್**

**ವಿಜಯಪುರ**

# ಗಾಂಧಿಯ ಮರಿಮರಿಮರಿ ಮೊಮ್ಮಗಳ ಕಥೆ – ರಾಮಕೃಷ್ಣ

**ಕೊಲ್ಬೇಡೀ . . . ಕೊಲ್ಬೇಡೀ . . .**

ನಾನು ಪುಟ್ಟಮ್ಮನಿಗೆ ಒಂದು ಕಥೆ ಹೇಳಿದ್ದೆ. ಅದು ಒಂದು ಇಲಿಯ ಕಥೆ. ಅಮ್ಮ ಇಲಿ ತನ್ನ ಮಕ್ಕಳಿಗೆ ದೋಸೆಮಾಡಿ ತಿನ್ನಿಸುವ ಕಥೆ. ಅಮ್ಮಿಲಿ ಅಂಗಡಿಗೆ ಹೋಗುವುದು, ಅಕ್ಕಿ ಉದ್ದು ತರುವುದು, ನೆನಸುವುದು, ಗ್ಯಾಸ್ ಉರಿ ಹಚ್ಚಿ, ಸ್ಟೌ ಮೇಲೆ ಕಾವಲಿಯಿಟ್ಟು, ದೋಸೆ ಹುಯ್ಯುವುದು, ಮಕ್ಕಳಿಗೆ ಆಟ ಸಾಕಿನ್ನು ಹೇಳಿ ದೋಸೆ ತಿನಿಸುವುದು, ಎಲ್ಲಾ ಇದೆ ಅದರಲ್ಲಿ. ಅದು ಅವಳಿಗೆ ಎಷ್ಟು ಹಿಡಿಸಿತ್ತೆಂದರೆ ಆಮೇಲೆ ಅವಳು ತಾನೆ ಅಮ್ಮಿಲಿ ಅನ್ನುತ್ತ ಆ ಕಥೆಯನ್ನು ಅಭಿನಯಿಸುವುದಕ್ಕೆ ಪ್ರಾರಂಭಿಸಿದಳು.

ಆದಿನ ಅವಳು ಅವಳಮ್ಮನ ಜೊತೆ ಅಂಗಡಿಗೆ ಹೋಗಿದ್ದಳು. ಅಲ್ಲಿ ಪರಿಚಯವಿಲ್ಲದ ಒಬ್ಬ ಅತ್ತೆ, ಅಂಗಡಿಯವನಿಗೆ, "ಸಾರ್, ಸಕ್ರೆ ಕೊಡಿ" ಅಂತ ಕೇಳಿದರಂತೆ. ಆಗ ಪುಟ್ಟಮ್ಮ ತಾನೂ, "ಸಾರ್, ಅಕ್ಕಿ ಕೊಡಿ; ಸಾರ್, ಉದ್ದು ಕೊಡಿ" ಅಂತ ಕೇಳಿದಳಂತೆ. ಅವಳ ಅಮ್ಮನಿಗೆ ಆಶ್ಚರ್ಯವಾಗಿ, "ಎಂತಕೆ?" ಅಂತ ಕೇಳಿದರು. ಪುಟ್ಟಮ್ಮ ಗಂಭೀರವಾಗಿ 'ದೋಸೆ ಮಾಡುವುದಕ್ಕೆ" ಅಂದಳು. ಅಮ್ಮನಿಗೆ ಚೋದ್ಯವಾಗಿ ಉಳಿದ ಎಲ್ಲಾ ಸಾಮಾನುಗಳ ಜೊತೆ ಅಕ್ಕಿ ಉದ್ದನ್ನೂ ಕೊಂಡರು.

ಮನೆಗೆ ಬಂದ ಪುಟ್ಟಮ್ಮ, "ಅಕ್ಕಿ ನೆನೆಸಿದೆ ಆಯ್ತಾ, ಉದ್ದು ನೆನೆಸಿದೆ ಆಯ್ತಾ, ಉದ್ದು ಕಡೆದೆ ಆಯ್ತಾ, ಅಕ್ಕಿ ಕಡೆದೆ ಆಯ್ತಾ, ಹಿಟ್ಟು ಕಲಸಿದೆ ಆಯ್ತಾ!" ಅಂತ ಎಲ್ಲಾ ಕೆಲಸ ಮಾಡಿದ ಹಾಗೆ ಮಾಡಿದಳು. ಆಮೇಲೆ ಅವಳಿಗೆ ಮಾತ್ರ ಕಾಣಿಸುತ್ತಿದ್ದ ಕಾವಲಿಗೆ ಮೇಲೆ, "ದೋಸೆ ಚೊಂಯ್ಯೋ" ಅನ್ನುತ್ತ ಕೈಸುತ್ತಿ, ಎಣ್ಣೆ ಸವರಿ ದೋಸೆ ಹುಯ್ದಳು.

ಅಷ್ಟಾಗಿ ಅವಳು ಅವಳಮ್ಮನನ್ನು ಕರೆದು, "ನಾನು ಅಮ್ಮ ಇಲಿ" ಅಂದಳು. "ಮಕ್ಕಳಿಗೆ ದೋಸೆ ಮಾಡಿದ್ದೇನೆ" ಅಂದಳು. "ದೋಸೆ ತಿನ್ನೋದಿಕ್ಕೆ ಬನ್ನಿ" ಅಂತ ಎಲ್ಲಾ ಮಕ್ಕಳನ್ನೂ ಕರೆದಳು. "ಆಡಿದ್ದು ಸಾಕು" ಅಂತಲೂ ಸೇರಿಸಿದಳು.

ಅದೆ ವೇಳೆ ಒಂದು ಸಂಗತಿ ನಡೆಯಿತು. ಅವರ ಮನೆಯ ಬೆಕ್ಕು, 'ಗುರ್, ಗುರ್ 'ಅನ್ನುತ್ತ, ಯಾರಿಗೂ ಕಾಣಬಾರದಂತ ಕಳ್ಳನಂತೆ ಹೆಜ್ಜೆ ಹಾಕುತ್ತ, ತೋಟದ ಕಡೆಯಿಂದ ಬಂತು. ಅದರ ಬಾಯಲ್ಲಿ ಒಂದು ಸುಟ್ಟವಿನಂತಿದ್ದ ಮರಿ ಇಲಿಯನ್ನು ಕಚ್ಚಿಕೊಂಡಿತ್ತು. ಅದು ನಾಕೈದು ಮಕ್ಕಳನ್ನು ಈದು ದೊಡ್ಡದು ಮಾಡಿ ಮುಸ್ಸಂಜೆ ಆದಂತೆ, ಒಂದೆ ಸವನೆ ಇಲಿ ಮರಿಗಳನ್ನು ಬೇಟೆಯಾಡಿ ತಂದು ಅವುಗಳ ಬಾಯಿಗೆ ಒಪ್ಪಿಸುತ್ತಿತ್ತು.

ಪುಟ್ಟಮ್ಮನಿಗೆ ಬೆಕ್ಕಿನ ಬಾಯಲ್ಲಿ ಇಲಿಮರಿಯನ್ನು ಕಂಡು ವ್ಯಾಕುಲತೆಯಾಯಿತು. ಆಗ ಒಮ್ಮೆಲೆ ಗುರುಗಾಯಿಸುತ್ತಿದ್ದ ಬೆಕ್ಕಿಗೆ ಏನು ಮಾಡುವುದು ತಿಳಿಯದೆ, "ಕೊಲ್ಬೇಡೀ . . . ಕೊಲ್ಬೇಡಿ . . ." ಅಂತ ಹುಯ್ಲಿಟ್ಟಳು. ಏನು ಮಾಡುವುದು ತಿಳಿಯದೆ ತಕತಕ ಕುಣಿದಳು. ಮತ್ತೆಮತ್ತೆ "ಕೊಲ್ಬೇಡೀ . . ." ಅನ್ನುತ್ತ ತಕತಕ ಕುಣಿದಳು.

ಬೆಕ್ಕಿಗೆ ಗಾಬರಿಯಾಯಿತು. ಅದು ಪುಟ್ಟಮ್ಮನಿಗೆ ತಿರುಗಿ ಹೇಳುವುದಕ್ಕೆ, ಸ್ವಲ್ಪ ಬಾಯಿ ತೆಗೆದು ಕ್ರೂರವಾಗಿಯೆ, "ಮಿಯಾಂ" ಅಂದಿತು. ಅದರ ಬಾಯಿಯಿಂದ ಇಲಿ ತಪ್ಪಿಸಿಕೊಂಡಿತು. ಆಗ ಅಮ್ಮನೆ ಆ ಬೆಕ್ಕನ್ನು ಓಡಿಸಿದರು. ಮತ್ತು ಮಗಳಿಗೆ, "ನೀನು ಸ್ವಲ್ಪ ಗಾಂಧಿಯ ಹಾಗೆ ಆಯ್ತಾ. ನಿನಗೆ ಯಾರೂ ಯಾರನ್ನೂ ಕೊಲ್ಬಾರ್ದು ಅಲ್ವಾ?" ಅಂದರು. ತನ್ನ ಹಾಗೆ ಇದ್ದ ಗಾಂಧಿಯ ಬಗೆಗೆ ಅವಳಿಗೆ ಕುತೂಹಲವಾಗಿ, "ಗಾಂಧಿ ಯಾರಮ್ಮ? ಅವರ ಕಥೆ ಹೇಳ್ತಿಯಾ? ಹೇಳಮ್ಮ" ಅಂತ ವರಾತ ತೆಗೆದಳು." ಆಗ ಅವಳಮ್ಮ, "ಅದಕ್ಕೂ ನೀನು ಗಾಂಧಿಯ ಹಾಗೆ ಸತ್ಯಾಗ್ರಹ ಮಾಡ್ತಿಯಾ ಹೇಗೆ?" ಅಂದರು. ಅವಳಿಗೆ ಗಾಂಧಿ ಬಗ್ಗೆ ಕುತೂಹಲ ಬುಗ್ಗನೆ ಎಚ್ಚೆತ್ತುಕೊಂಡಿತು. ಅವರಮ್ಮ, ಬೊಳುವಾರರ, 'ಪಾಪು ಗಾಂಧಿ ಬಾಪು ಆದ ಕಥೆ' ಪುಸ್ತಕವನ್ನು ಕಪಾಟಿನಿಂದ ತಂದು, "ನೋಡಿಕೊಂಡಿರು, ಆ ಮೇಲೆ ಕಥೆ ಹೇಳುವುದು ಇದ್ದೇ ಇದೆ" ಅಂದರು.

ಆಗ ಅವಳ ಗಮನ ಮತ್ತೆ ಪಿಳಿಪಿಳಿ ಕಣ್ಣು ಬಿಡುತ್ತ ಬೆದರಿ ಮುದ್ದೆಯಾಗಿದ್ದ ಇಲಿ ಮರಿ ಕಡೆ ಹೋಯಿತು. ಅಮ್ಮನಿಗೆ ಹೇಳಿದಳು, "ಅಮ್ಮ, ಇಲಿಮರಿಗೆ ನೀನು ಮಾಡಿದ ನಿಜವಾದ ದೋಸೆ ತಂದು ಕೊಡಮ್ಮಾ" ಅಂತ.



“ನನ್ನ ರಕ್ಷಣೆ ನನ್ನದೇ ಹೊಣೆ”

ಚಿತ್ರ ಕೃಪೆ–ರವಿ. ಬಿ.ಟಿ

# Please Contact Bayalu Team

| Sl. No. | Name | Mail id |
|---|---|---|
| 1 | Raghavendra Herle G. | raghavendra.herle@azimpremjifoundation.org |
| 2 | Showrish Kudkuli | showrish.kudkuli@azimpremjifoundation.org |
| 3 | Benny Mathews | benny.mathews@azimpremjifoundation.org |
| 4 | Chikkaveeresha S. V. | chikkaveeresha.v@azimpremjifoundation.org |
| 5 | Lakshmidevi | lakshmidevi@azimpremjifoundation.org |
| 6 | Gopalakrishna Induguli | gopalakrishna@azimpremjifoundation.org |
| 7 | Yathiraj Sharma | yathiraj.sharma@azimpremjifoundation.org |
| 8 | Naganand GV | nagananda.gv@azimpremjifoundation.org |
| 9 | Ravi B T | ravi@azimpremjifoundation.org |
| 10 | Niranjan Sravade | niranjan.sarvade@azimpremjifoundation.org |
| 11 | Sudharshan K | sudharshan.k@azimpremjifoundation.org |
| 12 | Shivaji | shivaji.ganpatrao@azimpremjifoundation.org |
| 13 | Lohit | lohitashwa.chamanoor@azimpremjifoundation.org |
| 14 | Giridhar Vaidya | giridhara.vaidya@azimpremjifoundation.org |
| 15 | Muzamimml | muzammil.mahaldar@azimpremjifoundation.org |
| 16 | Shivukumar | shivukumar@azimpremjifoundation.org |
| 17 | Gangadhar.Swamy | gangadhar.swamy@azimpremjifoundation.org |
| 18 | Pradeep Kumar | pradeep.kumar@azimpremjifoundation.org |
| 19 | Swathi Subramanya | swathi.subramanya@azimpremjifoundation.org |
| 20 | Shivakumara Swamy | shivakumara.swamy@azimpremjifoundation.org |
| 21 | Gundappa Katekar | gundappa.katekar@azimpremjifoundation.org |

# Thank you